ಕಾಮಗಾರಿಯನ್ನು ಪ್ರಾರಂಭಿಸಿ ಸಂಪೂರ್ಣಗೊಳಿಸಲಿಕ್ಕೆ, ಹಣದ ಕೊರತೆಯಿರುವ ಈ ಸಂದರ್ಭದಲ್ಲಿ ಸರ್ಕಾರದಿಂದ ಹಣ ಬಿಡುಗಡೆಗೊಳಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ : 193(984)

(ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡರು ಸದನದಲ್ಲಿ ಹಾಜರಿರಲಿಲ್ಲ)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗೃಹ ಮತ್ತು ಕಾನೂನು ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ: 4ನೇ ಜುಲೈ 2006ರಂದು 15ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 130 ಪ್ರಶ್ನೆಗಳ ಪೈಕಿ, 118 ಪ್ರಶ್ನೆಗಳಿಗೆ ಉತ್ತರಗಳನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–1)

3. ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ಕೋರಿಕೆ.

ವಿಷಯ : ಬಿ.ಎಂ.ಐ.ಸಿ. ಯೋಜನೆಯ ಸಮ್ಮಿಶ್ರ ಸರ್ಕಾರದಲ್ಲಿ ಭಿನ್ನಾಭಿಪ್ರಾಯ ಇರುವ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಸಭಾಧ್ಯಕ್ಷರೇ, ಈಗ ಅಧಿವೇಶನ ನಡೆಯುತ್ತಾ ಇದೆ. ಸದನದಲ್ಲಿ ಬಿ.ಎಂ.ಐ.ಸಿ. ಪ್ರಾಜೆಕ್ಟ್ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಈಗಾಗಲೇ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು, ರಮೇಶ್‌ಕುಮಾರ್‌ರವರು ಮತ್ತು ದೇಶಪಾಂಡೆಯವರು ನಿಯಮ 69ರ ಮೇರೆಗೆ ಈ ವಿಷಯವಾಗಿ ಮಾತನಾಡಿದ್ದಾರೆ. ಇನ್ನೂ ಕೂಡ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ನಾವು ನಿಲುವಳಿ ಸೂಚನೆ ತಂದಮೇಲೆ, ಇದಕ್ಕೆ ಅಡ್ಡಿ ಆತಂಕ ಬಂದವು. ಈಗಾಗಲೇ ಸಮ್ಮಿಶ್ರ ಸರ್ಕಾರದಲ್ಲಿ ಬಿ.ಎಂ.ಐ.ಸಿ. ಪ್ರಾಜೆಕ್ಟ್ ಬಗ್ಗೆ ಭಿನ್ನಾಭಿಪ್ರಾಯ ಇದೆ. ಸ್ಪಷ್ಟವಾದ ನಿಲುವನ್ನು ಸರ್ಕಾರ ಸ್ಪಷ್ಟಪಡಿಸಿದ ಮೇಲೆ, ಇವತ್ತು ಚರ್ಚೆಗೆ ಮುಂದಾಗ ಬೇಕೆಂಬುದು ನಮ್ಮ ಅಭಿಪ್ರಾಯ. ಆದರೂ ಕೂಡ ಸಾರ್ವಜನಿಕರ ಮನಸ್ಸಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಬಿ.ಎಂ.ಐ.ಸಿ. ಪ್ರಾಜೆಕ್ಟ್ ಬಗ್ಗೆ ಏನೋ ಅನಾಹುತವಾಗಿದೆ ಎನ್ನತಕ್ಕಂಥ ಶಂಕೆ ಇದೆ. ನಾವು ಅದಕ್ಕೆ ತಡೆಹಿಡಿದರೆ, ಕಾಂಗ್ರೆಸ್ ಪಕ್ಷದವರು ಅನಾವಶ್ಯಕವಾಗಿ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂಬ ಮಾತು ಬರುತ್ತದೆ. ಇವತ್ತು ಪತ್ರಿಕೆಯನ್ನು ತಾವೂ ನೋಡಿದ್ದೀರಿ. ನಾವೂ ನೋಡಿದ್ದೇವೆ. ಇವತ್ತು ಸದನದಲ್ಲಿ ಈ ಚರ್ಚೆ ನಡೆಯತಕ್ಕ ಕಾಲದಲ್ಲಿ, ಸದನದ

ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾರದೆ, ಸುಪ್ರೀಂ ಕೋರ್ಟಿಗೆ ಈ ಬಿ.ಎಂ.ಐ.ಸಿ ಪ್ರಾಜೆಕ್ಟ್ ಬಗ್ಗೆ ರಿವ್ಯೂ ಪಿಟಿಷನ್ ಹಾಕಿದ್ದಾರೆ. ಇದು ಎಂದೂ ಆಗಲಾರದಂಥ ವಿಷಯ. ಇವತ್ತು ಏನಾಗಿದೆ, ಮುಖ್ಯಮಂತ್ರಿಗಳು ಇವತ್ತು ಉತ್ತರ ಕೊಡುತ್ತೇನೆಂದು ನಿನ್ನೆ ಹೇಳಿದರು. ಇದರ ಬಗ್ಗೆ ನಮ್ಮ ಖರ್ಗೆಯವರೂ ಕೂಡ ಮಾತನಾಡಬೇಕಿತ್ತು. ಇಂತಹ ಸಂದರ್ಭದಲ್ಲಿ ಇವತ್ತು ಸುಪ್ರೀಂ ಕೋರ್ಟಿನಲ್ಲಿ ರಿವ್ಯೂ ಪಿಟಿಷನ್ ಹಾಕುವುದಕ್ಕೆ ಹೋಗಿದ್ದಾರೆ. ಅದಕ್ಕಾಗಿ, ತಾವು ಅನುಮತಿ ಕೊಡಬೇಕು. ರೂಲ್ಸ್ ಆಫ್ ಪ್ರೋಸೀಜರ್ 191ರಲ್ಲಿ ಹಕ್ಕುಚ್ಯುತಿ ನಿರ್ಣಯವನ್ನು ನಾವು ಮಂಡನೆ ಮಾಡುತ್ತಾ ಇದ್ದೇವೆ. ಈ ಚರ್ಚೆಗೆ ಅವಕಾಶ ಕೊಡಬೇಕು. ಇದು ಬಹಳ ಗಹನವಾದಂಥ ವಿಚಾರ. ನೀವು ಗಂಟೆ ಬಾರಿಸಬಾರದು.

ಅಧ್ಯಕ್ಷರು : ಇಲ್ಲ, ಇಲ್ಲ. ಈಗ ವಿರೋಧ ಪಕ್ಷದ ನಾಯಕರಲ್ಲಿ ಹೇಳುವುದೇನೆಂದರೆ, ಇದನ್ನು ಸದನ ಆರಂಭವಾಗುವುದಕ್ಕೆ ಮೊದಲು ನಮ್ಮ ಕಛೇರಿ ಕಾರ್ಯದರ್ಶಿಯವರಿಗೆ ಕೊಡಬೇಕಾಗಿತ್ತು. ಇತ್ತೀಚೆಗೆ ಕೊಟ್ಟಿದ್ದೀರಿ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವನ್ನೂ ಕೇಳೋಣ.

ಶ್ರೀ ಎನ್. ಧರ್ಮಸಿಂಗ್ : ನಾವು ಪತ್ರಿಕೆಯನ್ನು ಓದಿದೆವು, ನಮ್ಮ ಪಕ್ಷದ ಕಛೇರಿಯಲ್ಲಿ ನಾವು ಮಾತನಾಡಿದೆವು. ಇದು ಅತ್ಯಂತ ತುರ್ತು ವಿಷಯ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ಸರಿಯಾಗಿ ಹೇಳಿದಿರಿ. ಸದನ ಪ್ರಾರಂಭವಾಗುವುದಕ್ಕೆ ಮೊದಲು ಕೊಡಬೇಕು. ಸಾಮಾನ್ಯವಾಗಿ ಏನಾಗುತ್ತದೆಂದರೆ, ನಮಗೆ ಹಿಂದಿನ ದಿವಸವೇ ಮಾಹಿತಿ ಸಿಕ್ಕಿದರೆ, ಬೆಳಿಗ್ಗೆಯೇ ಬಂದು ಆ ಕೆಲಸ ಮಾಡುತ್ತೇವೆ. ಬೆಳಿಗ್ಗೆ ನ್ಯೂಸ್ ಪೇಪರ್ ಓದಿದ ಮೇಲೆ ನಾವು ಬಂದು, ನಮ್ಮ ಸಿಬ್ಬಂದಿಯೆಲ್ಲಾ ಬಂದ ಮೇಲೆ ಕೊಟ್ಟಿದ್ದೇವೆ. ಇವತ್ತು 11 ಗಂಟೆಗೆ ಸದನ ಸೇರಿದೆ. 10 ನಿಮಿಷ ನಮ್ಮ ಕಡೆಯಿಂದ ತಡ ಆಗಿದೆ. ನೀವು, in view of the seriousness of the situation ಆ 10 ನಿಮಿಷವನ್ನು ತಾಂತ್ರಿಕವಾಗಿ ತೆಗೆದುಕೊಳ್ಳದೆ ರೂಲ್ಸನ್ನು ರಿಲ್ಯಾಕ್ಸ್ ಮಾಡಿ ಅವಕಾಶಕೊಡಬೇಕು. ಇವತ್ತು ಬೆಳಿಗ್ಗೆ ಇದು ಬಂದಿರತಕ್ಕಂಥಾದ್ದು, 11 ಗಂಟೆಗೆ ಅಧಿವೇಶನ ಇತ್ತು, ಸದಸ್ಯರು ಬಂದು ಕೊಡುವುದರಲ್ಲಿ ಸ್ವಲ್ಪ ತಡವಾಗಿದೆ. ಇದನ್ನು ತೆಗೆದುಕೊಳ್ಳುವುದರಲ್ಲಿ ತಮಗೆ ಯಾವುದೂ ಅಡ್ಡ ಇಲ್ಲ. In the meanwhile, we are also willing to listen to the Government's version.

ಅಧ್ಯಕ್ಷರು : ನೋಡೋಣ, ಇವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಇದು ಮಹತ್ವವಾದ ವಿಚಾರ, ಚರ್ಚೆಯನ್ನು ಮಾಡಬಹುವುದು ಎನ್ನುವ ವಿಚಾರವನ್ನು ಕಾಂಗ್ರೆಸ್ ಸದಸ್ಯರು ಪದೇ

ಪದೇ ಮಾತನಾಡುತ್ತಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರೂ ಕೂಡ, ಇದರ ಬಗ್ಗೆ ಮಸೂದೆಯನ್ನು ತರುವುದಾಗಿದ್ದರೂ ನಮ್ಮಿಂದ ಆಕ್ಷೇಪಣೆ ಇಲ್ಲವೆಂಬ ಮಾತನ್ನಾಡಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ, ಸರ್ಕಾರದಲ್ಲಿ ಯಾವ ಕ್ರಮವನ್ನು ಕೈಗೊಳ್ಳುತ್ತೇವೆ, ಇದರ ಬಗ್ಗೆ ಸರಿಪಡಿಸುವಂಥ ರೀತಿ ಏನು ಎನ್ನುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥಾದ್ದೂ ಕೂಡ ಇದೆ. ಈ ಸನ್ನಿವೇಶದಲ್ಲಿ ಒಂದಲ್ಲ ಒಂದು ರೀತಿಯಿಂದ ಚರ್ಚೆ ಆಗಬಾರದು ಎನ್ನುವಂಥ ಉದ್ದೇಶ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಈ ಸಂದರ್ಭದಲ್ಲಿ ನಾವು ನಿಯಮಾವಳಿಗಳನ್ನು ಅನುಸರಿಸಿ ಕೆಲಸವನ್ನು ಮಾಡಬೇಕಾಗುತ್ತದೆ. ನಿಯಮ 192ರ ಕೆಳಗೆ ನಮ್ಮದೇ ಆಗಿರತಕ್ಕಂಥ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ ಹಕ್ಕುಬಾಧ್ಯತೆ ಪ್ರಶ್ನೆ ಸಂಬಂಧದಲ್ಲಿ ಸೂಚನಾ ಪತ್ರ:

> "ಹಕ್ಕುಬಾದ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಪತ್ರವನ್ನು ಕೊಡತಕ್ಕದ್ದು. ದಸ್ತಾವೇಜಿನ ಆಧಾರದಲ್ಲಿ ಪ್ರಶ್ನೆಯನ್ನು ಹಾಕುವುದಿದ್ದರೆ, ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದ್ದು. ಎಂದಿದೆ

ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ತಾವು ಮೂಲಭೂತವಾಗಿ ಕೇಳಿದ್ದೀರಿ. ಮಾನ್ಯ ಸದಸ್ಯರು ಎತ್ತಿದಂಥಾದ್ದು, ಈ ದಿವಸ ಪತ್ರಿಕೆಗಳಲ್ಲಿ ನೋಡಿದೆವು ಎಂದು ಹೇಳಿದ್ದಾರೆ. ಪ್ರತಿಕೆಗಳು ಬೆಳಿಗ್ಗೆ 6 ಗಂಟೆಗೇ ಬಂದಿರುತ್ತವೆ. ಆ ದಸ್ತಾವೇಜನ್ನೂ ಕೂಡ ತಾವು ಲಗತ್ತಿಸಿದ್ದೀರಿ. ಅದು ಒಂದು ಪತ್ರಿಕಾ ಹೇಳಿಕೆ ಇರತಕ್ಕಂಥಾದ್ದು. ಬಿ.ಎಂ.ಐ.ಸಿ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಮನರ್ ವಿಮರ್ಶೆ ಅರ್ಜಿ., ಇದು ಕನ್ನಡ ಪ್ರಭಾ, ದಿನಾಂಕ: 4–7–06. ಬಿ.ಎಂ.ಐ.ಸಿ. ಸುಪ್ರೀಂಕೋರ್ಟಿಗೆ ರಾಜ್ಯದ ಅರ್ಜಿ ಪ್ರಜಾವಾಣಿ, ದಿನಾಂಕ: 4–7–06, ಬಿ.ಎಂ.ಐ.ಸಿ ಪ್ರಾಜೆಕ್ಟ್ ರಿವ್ಯೂ ಪಿಟಿಷನ್ ಫೈಲ್ಡ್ First step taken to regulate the project' ಈ ರೀತಿಯ ಪತ್ರಿಕಾ ತುಣುಕುಗಳನ್ನು ಇದರ ಜೊತೆಗೆ ಕಳುಹಿಸಿಕೊಟ್ಟಿದ್ದಾರೆ. ಇದು ದಸ್ತಾವೇಜು ಅಲ್ಲ ಪತ್ರಿಕಾ ಪ್ರಕಟಣೆಗಳು ಅಥವಾ ಬಂದರತಕ್ಕಂಥ ವರದಿಗಳು ದಸ್ತಾವೇಜು ಆಗಲಿಕ್ಕೆ ಸಾಧ್ಯವಿಲ್ಲ. ಅವು, ನಮ್ಮ ಇಂಡಿಯನ್ ಎವಿಡ್‌ನ್ಸ್ ಆಕ್ಟ್‌ನಲ್ಲೂ ಕೂಡ ಅಲ್ಲ. ಈಗ ನಾವು ಅದನ್ನು ಚರ್ಚೆ ಮಾಡಬೇಕಾಗಿದ್ದಾಗ, ಅದು ಮುಖ್ಯವಾಗಿರತಕ್ಕಂಥಾದ್ದೂ ಅಲ್ಲ. ಮೂಲಭೂತವಾಗಿ ತಮಗೇ ಇದನ್ನು ಕೊಟ್ಟಿರತಕ್ಕಂಥಾದ್ದನ್ನು ಮತ್ತೆ ತಾವು

ಪರಿಗಣಿಸಬೇಕಾಗುತ್ತದೆ. ನಮ್ಮದೇ ಆದಂಥ ನಿಯಮಾವಳಿಗಳ ಪ್ರಕಾರ ಈ ವಿಚಾರವನ್ನು ಎತ್ತುವುದಕ್ಕೆ ಈ ದಿವಸ ಯಾವುದೇ ತರವಾದಂಥ ಅವಕಾಶವನ್ನು ತಾವು ಕೊಡಬಾರದು. ಏಕೆಂದರೆ, ಇದು infirmity. It sufers from infirmity. ಆ ಕಾರಣಕ್ಕಾಗಿಯೇ ಕೊಡಬಾರದು. ನಮ್ಮದೇ ಆದ ನಿಯಮಗಳ ಉಲ್ಲಂಘನೆ ಆಗುತ್ತದೆ. ಈ ಮಾತನ್ನು ಹೇಳಿ, ಅತ್ಯಂತ ವಿನಯಪೂರ್ವಕವಾಗಿ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ಇದರ ಜೊತೆಗೆ ನಮ್ಮದೇ ಆಗಿರತಕ್ಕಂಥ ಅನೇಕ ನಡವಳಿಕೆಗಳಲ್ಲಿ, What constitues the privilege? whether it is any appearance in a newspaper, can it constitute a privilege? ಎನ್ನತಕ್ಕಂಥಾದ್ದುಬರುತ್ತದೆ. ಸನ್ಮಾನ್ಯ ಅಧ್ಯಕ್ಷರೇ, 'Press report-Press report cannot be the basis for a privilege motion.'

"On 10th September, 1968, the Hon'ble Member Sri M. Nagappa had sent a notice of Privilege Motion against the Deputy Minister for Co-operation Sri B.L. Gowda on the basis of a Press Report that he went as a witness before the Naronha Commission to tender evidence with taking the permission of the House. Thereupon, the Hon'ble Speaker observed as follows:

The basis for a Privilege Motion should be the deposition or the statement alleged to have been made by the Deputy Minister before the Naronha Commission. The Statement in the Press Report cannot at all be relied upon and it cannot be accepted. The position is clear that the Newspaper Report cannot be made the basis for a privilege motion. Here the position is, under Rule 178....

Then it was 178. Now it has become 191.

"......If I were to give my consent, the document upon which the Motion is based must be before me, and I cannot take notice of newspaper report a cutting of which has been

given to me by Sri Nagappa. I therefore rule that unless the certified copy of the deposition said to have been made by the Hon'ble Deputy Minister Sri B.L. Gowda before the Naronha commission is produced before me, the chair cannot consider the matter at all.

ಈ ತರಹದ ನಮ್ಮದೇ ಆಗಿರತಕ್ಕಂಥ ರೂಲಿಂಗ್‌ಗಳು ಇವೆ. ಇದರ ಬಗ್ಗೆ ಅನೇಕ ಕಡೆಗಳಲ್ಲಿ ಅಂದರೆ, ಕಾಲ್ ಅಂಡ್ ಶಕ್ಷರ್ ಮತ್ತೊಂದರಲ್ಲಿ ಪ್ರಸ್ತಾಪ ಆಗಿರತಕ್ಕಂಥಾದ್ದು ಇದೆ. ಮಾನ್ಯ ರಮೇಶ್ ಕುಮಾರ್‌ರವರಿಗೂ ಕೂಡ ಗೊತ್ತಿದೆ. ಅವರು ಸುಮಾರು 5 ವರ್ಷಗಳ ಕಾಲ ನಿಷ್ಪಕ್ಷಪಾತವಾಗಿ ಮತ್ತು ಬಹಳ ಉತ್ತಮವಾದ ರೀತಿಯ ನಡವಳಿಕೆಗಳಿಗೆ ಸಂಬಂಧಪಟ್ಟಂತೆ ಮುಂದೆ ನಾವೆಲ್ಲರೂ ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ರೂಲಿಂಗ್ ಕೂಡ ಕೊಟ್ಟಿಂಥವರಾಗಿದ್ದಾರೆ. ಆ ಕಾರಣಕ್ಕಾಗಿಯೇ, ಮೊದಲನೆಯದಾಗಿ ಈ ಮೋಷನ್ ನಿಯಮಾವಳಿಗಳ ಪ್ರಕಾರ ಇಲ್ಲದೇ ಇರತಕ್ಕಂಥಾದ್ದು ನಿಯಮ 191 ಕೆಳಗೆ. ಎರಡನೆಯದು, ಯಾವುದೇ ಒಂದು ಪತ್ರಿಕೆಯಲ್ಲಿ ಬಂದಿರತಕ್ಕಂಥ ತುಣುಕಿನ ಆಧಾರದ ಮೇಲೆ ಕೊಟ್ಟರೆ, ಅವು ದಸ್ತಾವೇಜುಗಳು ಅಲ್ಲ. ಅವು ಅಧಿಕೃತವಾದ ದಸ್ತಾವೇಜುಗಳಾಗಿದ್ದಾಗ ಮಾತ್ರ ತಮ್ಮ ಹತ್ತಿರ ಕಳುಹಿಸಬೇಕು. ಮತ್ತೆ ಮೂರನೆಯದು, ಯಾವುದೇ ನಿಲುವಳಿ ಸೂಚನೆಯಾಗಲೀ, ನಡವಳಿಕೆಗಳ ವಿಚಾರವಾಗಲೀ, ಪ್ರಿವಿಲೇಜಿನ ಸಂದರ್ಭ ಬಂದಾಗ, ಸರ್ಕಾರ ದೈನಂದಿನ ಆಡಳಿತ ಮಾಡ ತಕ್ಕಂಥಾದ್ದು ಏನಿದೆ, ಅದರ ಬಗ್ಗೆ ಯಾವುದೇ ಪ್ರಿವಿಲೇಜ್ ಆಗಲೀ, ನಿಲುವಳಿ ಸೂಚನೆಯನ್ನು ತರುವುದಾಗಲೀ ಮಾಡಬಾರದು ಎನ್ನತಕ್ಕಂಥಾದ್ದು ಇದೆ. ಇದೂ ಒಂದು ದೈನಂದಿನ ನಿರ್ಣಯ. ಸರ್ಕಾರ ತೆಗೆದುಕೊಂಡಿರತಕ್ಕಂಥಾದ್ದು ದೈನಂದಿನ ನಡವಳಿಕೆಗಳು. ಆ ತರಹದಲ್ಲಿ ಆಗಿದ್ದರೆ, ಈ ತರಹದ ಪ್ರಶ್ನೆಗಳು ಉದ್ಭವವಾದವುಗಳಾಗಿದ್ದರೆ, ನಾವು ಯಾವ ಕಾರ್ಯಕಲಾಪಗಳನ್ನೂ ಸರ್ಕಾರದಿಂದ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು 36–37 ವರ್ಷಗಳ ಕಾಲ ಹಿರಿಯರಾಗಿರತಕ್ಕಂಥ ಇಬ್ಬರು ನಮ್ಮ ಸದನದಲ್ಲಿ ಇದ್ದಾರೆ. ಅವರಿಬ್ಬರೂ ನಮಗೆ ಮಾರ್ಗದರ್ಶನ ಮಾಡುತ್ತಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಮಾರ್ಗದರ್ಶನ ಮಾಡುತ್ತಾರೆಂದು ನಾವು ಭಾವಿಸಿಕೊಂಡಿದ್ದೇನೆ. ಆದ್ದರಿಂದ, ದೈನಂದಿನ ಆಡಳಿತವನ್ನು ನಾವು ಪ್ರಶ್ನಿಸುವುದಕ್ಕೆ ಅದು ಹಕ್ಕುಚ್ಯುತಿಯಾಗುವುದಿಲ್ಲ ಎನ್ನತಕ್ಕಂಥಾದ್ದು ಒಂದು. ಇಷ್ಟೆಲ್ಲಾ ಆದಾಗಲೂ ಕೂಡ, ಬರೀ ವಾದಕ್ಕಾಗಿಯೇ ವಾದವನ್ನು ಇಟ್ಟು ಕೊಳ್ಳುವುದಾದರೆ, ಮಾನ್ಯ ರಮೇಶ್ ಕುಮಾರ್‌ರವರೂ ಒಪ್ಪಿಕೊಳ್ಳುತ್ತಾರೆ. At best, it could be construed as a

breach of courtesy, not as a privilege. ಬಹಳ ಏನೆಂದರೆ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಈ ವಿಷಯವನ್ನು ತಿಳಿಸಬೇಕು ಎನ್ನತಕ್ಕಂಥಾದ್ದು ಇದೆ. ತಿಳಿಸಬೇಕು ಎನ್ನತಕ್ಕಂಥಾದ್ದು it is a matter of courtesy. ಆದ್ದರಿಂದ ತಾವು ಈ ವಿಚಾರದಲ್ಲಿ ತಾವು ಈಗಾಗಲೇ ಹೇಳಿದಂತೆ ಈ ಮೋಷನ್ ಅನ್ನು ತಾವು ಕೈಗೆತ್ತಿಕೊಳ್ಳಬಾರದು. ಅದನ್ನು ತಿರಸ್ಕರಿಸಬೇಕು ಅಂತ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡತಕ್ಕಂಥ ಕಾಲದಲ್ಲಿ ಹೇಳಿದರು. ಸ್ವಲ್ಪ ಲೇಟ್ ಆಗಿದೆ ಕಂಡೋನ್ ಮಾಡಿ ಅಂತ. ಅವರು ಮಾನ್ಯ ನಾಗಪ್ಪನವರ ಕಾಲದಲ್ಲಿ ಏನಾಯಿತು ಅಂತ, ಹೇಳಿದರು. ಏಕೆಂದರೆ ಈಗ ನಾವು ಅರ್ಧಗಂಟೆ ಮುಂಚಿತವಾಗಿ ಹೇಳಿದ್ದಕ್ಕೆ ಒಂದು ಪುಸ್ತಕದಲ್ಲಿ ಇದ್ದುದನ್ನು ಹೇಳಿದ್ದಾರೆ. ಇನ್ನೂ ಬೇಗ ಕೊಟ್ಟುಬಿಟ್ಟದ್ದರೆ ಕೌಲ್ ಅಂಡ್ ಶಕೂರ್ ಎಲ್ಲಾ ಪುಸ್ತಕಗಳು ಬಂದುಬಿಡುತ್ತಿದ್ದವು. ಅವರು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದಾರೆ. ಅವರು ಬಹಳ ಚೆನ್ನಾಗಿ ಪ್ರತಿಪಾದನೆ ಮಾಡುತ್ತಾರೆ. ಏಕೆ ಹಕ್ಕುಚ್ಯುತಿಯಾಗುತ್ತದೆ ಎನ್ನುವುದನ್ನು ಪ್ರಸ್ತಾಪ ಮಡುತ್ತಿದ್ದೇವೆಂದರೆ ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ನಡೆಯತಕ್ಕಂಥ ಕಾಲದಲ್ಲಿ ಇವತ್ತು ಹಿಂದೂ ಪತ್ರಿಕೆಯಲ್ಲಿ ರಿಪೋರ್ಟ್ ಆಗಿದೆ. ಕನ್ನಡಪ್ರಭಾದಲ್ಲಿ ಆಗಿದೆ. ವಿಜಯ ಕರ್ನಾಟಕದಲ್ಲಿ ಆಗಿದೆ. ಪ್ರಜಾವಾಣಿಯಲ್ಲಿ ಆಗಿದೆ. ಇವತ್ತು ರಿವ್ಯೂ ಪಿಟೀಶನ್ ಹಾಕಿದ್ದಾರೆ. ಸದನ ನಡೆಯತಕ್ಕಂಥ ಕಾಲದಲ್ಲಿ ಸದನದ ಸದಸ್ಯರ ವಿಶ್ವಾಸವನ್ನು ತೆಗೆದುಕೊಳ್ಳಲಾರದೇ ಈ ಸರ್ಕಾರ ರಿವ್ಯೂ ಪಿಟೀಶನ್ ಹಾಕುವುದಕ್ಕೆ ಹೋಗಿ, ಇಲ್ಲಿ ನಾವು ಚರ್ಚೆ ಏನು ಮಾಡಬೇಕು ಎನ್ನತಕ್ಕಂಥಾದ್ದು ಮುಖ್ಯವಾದಂತಹ ವಿಷಯ. ಅದಕ್ಕೆ ನಾವು ಕೇಳುತ್ತಿರುವುದು, ಇದಕ್ಕೆ ತಾವು ಅನುವು ಮಾಡಿಕೊಡಬೇಕು. ಚರ್ಚೆ ಮಾಡಬೇಕು ಅಂತ ಹೇಳಿ ಇವತ್ತು ನಾವು ನೋಟೀಸ್ ಕೊಟ್ಟಿದ್ದೇವೆ, ಅದಕ್ಕೆ ತಾವು ಸ್ವಲ್ಪ ದಯಮಾಡಿ ಅವಕಾಶ ಕೊಡಿ. ನೀವು ಅವರು ಹೇಳಿದ ಮಾತು ಕೇಳಬೇಡಿ. ನಮ್ಮದು ಕೇಳಿ. ಇವತ್ತು ಏನಾಗಿದೆ ನಾವು ವಿರೋಧಪಕ್ಷದಲ್ಲಿ ಕುಳಿತು ಹೇಳತಕ್ಕಂಥಾದ್ದು ನಮ್ಮ ಕರ್ತವ್ಯ. ಇದಕ್ಕೆ ತಾವು ಅನುವು ಮಾಡಿ ಕೊಡಬೇಕು, ಚರ್ಚೆಯಾಗಬೇಕು. ಸದನದಲ್ಲಿ ಏನು ಮಾಡುತ್ತೀರಿ. ಇವತ್ತು ಸದನದಲ್ಲಿ ನಿಲುವಳಿ ಸೂಚನೆಯನ್ನು ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಮಾಧುಸ್ವಾಮಿಯವರು ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದಾರೆ. ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ಇಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಅಲ್‌ರೆಡಿ government has taken a decision

to file a review petition. ಮತ್ತೆ ಇವತ್ತು ಚರ್ಚೆ ಮಾಡತಕ್ಕಂಥಾದ್ದು ಏನು ಅಂತ ಹೇಳಿ ನಾನು ಮಾನ್ಯ ಸಭಾನಾಯಕರಲ್ಲಿ ಉತ್ತರ ಬಯಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಾಮುಖ್ಯವಾದಂತಹ ವಿಚಾರ ಇಲ್ಲಿ ಚರ್ಚೆಯಾಗುವಾಗ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಉತ್ತರ ಪಡೆಯಬೇಕಾಗಿದೆ. ಮತ್ತು ಇನ್ನೂ ಚರ್ಚೆಯಾಗಬೇಕಾಗಿದೆ. ಈ ಮಧ್ಯೆ ಮೇಲ್ಮನವಿಯನ್ನು ಸಲ್ಲಿಸಿರತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಇದು ಹಕ್ಕುಚ್ಯುತಿಯಂತೂ ನೇರವಾಗಿ ಆಗುತ್ತದೆ. ತಾಂತ್ರಿಕವಾಗಿ ಬದಲಾವಣೆ ಇರಬಹುದು. ಇದು ಹಕ್ಕುಚ್ಯುತಿಯಂತೂ ನೇರವಾಗಿ ಆಗುತ್ತದೆ ಎನ್ನುವುದು ಬಹಳ ಪ್ರಾಮುಖ್ಯವಾದಂತಹ ವಿಚಾರ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಸುದೀರ್ಘವಾಗಿ ತಮ್ಮ ಅಭಿಪ್ರಾಯವನ್ನು ತಮ್ಮ ಮುಂದೆ ಮಂಡಿಸಿದ್ದಾರೆ. ನಾವು ಈ ದಿವಸದ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುವ ಮೊದಲೇ ಅಧಿವೇಶನ ಪ್ರಾರಂಭವಾಗುವ ಮೊದಲೇ ತಮಗೆ ಅರ್ಜಿ ಸಲ್ಲಿಸಬೇಕಾದುದು ನಿಜ. ಯಾವ ಕಾರಣಕ್ಕಾಗಿ 10 ನಿಮಿಷಗಳು ತಡವಾಗಿದೆ, ದಿನಗಟ್ಟಲೆ ಗಂಟೆಗಳ ಗಟ್ಟಲೆ ತಡವಾಗಿಲ್ಲ. ಅದರ ವಾಸ್ತವಾಂಶ ಏನಿತ್ತು ಅದಕ್ಕೆ ಯಾವ ಕಟ್ಟುಕತೆಗಳೂ ಇಲ್ಲದಂತೆ ಸತ್ಯವನ್ನು ತಮ್ಮ ಮುಂದೆ ನಿವೇದಿಸಿಕೊಂಡಿದ್ದೇವೆ. ನಾವು ಈ ರೂಲ್ಸ್‌ನ್ನು ಮಾಡತಕ್ಕಂಥಾದ್ದು ಒಂದು ವೇಳೆ ಆ ದಿವಸ ಅಧಿವೇಶನ ನಡೆಯುವ ವೇಳೆಗೆ ಅಂತಹ ವಿಷಯ ನಮ್ಮ ಗಮನಕ್ಕೆ ಬಾರದೇ ಅಧಿವೇಶನ ಮುಕ್ತಾಯವಾದ ಮೇಲೆ ಬಂದಾಗ ಮಾರನೇ ದಿವಸ ಬೆಳಿಗ್ಗೆ ಎದ್ದು ನಾವು ಕೊಡುವಾಗ ಮೊದಲೇ ತಮಗೆ ಕೊಟ್ಟರೆ ತಾವು ಬಿಜಿನೆಸ್ ಅಡಜಸ್ಟ್ ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಆದ್ದರಿಂದ ನೋಟಿಸ್ ಕೊಡಬಹುದು ಎನ್ನತಕ್ಕಂಥ ಒಂದು ಸದುದ್ದೇಶದಿಂದ ಅದನ್ನು ನಾವು ಹಾಗೆ ಇಟ್ಟಿದ್ದೇವೆ. ಆದರೆ ನಾನು ತಮಗೆ ಹೇಳುತ್ತೇನೆ 10 ನಿಮಿಷ ಕಂಡೋನ್ ಮಾಡಬೇಕಾ, ಮಾಡಬಾರದಾ, ಎನ್ನುವ ಬಗ್ಗೆ ನಾನೇನೂ ಅದರ ಬಗ್ಗೆ ಪರ್‌ಸಿಸ್ಟ್ ಮಾಡುವುದಿಲ್ಲ. ಮಾನ್ಯ ನಾಗಪ್ಪನವರು ಈ ಸದನದಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಅದು ಅಷ್ಟೇ ಅಲ್ಲ. ಮಾನ್ಯ ಸಿದ್ದವೀರಪ್ಪನವರು ಒಂದು ಸಲ ಪ್ರಸ್ತಾಪ ಮಾಡಿದ್ದಾರೆ ಅದಕ್ಕೂ ಮೊದಲು ಕೆ. ಪುಟ್ಟಸ್ವಾಮಿಯವರು ಪಾರ್ಲಿಮೆಂಟರಿ ಅಫೇರ್ ಮಿನಿಸ್ಟರ್ ಆಗಿದ್ದಾಗ ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ವಿಷಯಗಳನ್ನು ನಾನು ಗಮನಿಸಿಕೊಂಡಿದ್ದೇನೆ. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ ಮಾನ್ಯ ಪ್ರಕಾಶ್‌ರವರೇ, ವಾದ ಮಂಡಿಸಬೇಕು ಎನ್ನುವ ಕಾರಣಕ್ಕಾಗಿ ನಾನು ವಾದ ಮಂಡಿಸುವುದಿಲ್ಲ. ಸಮಯ ಕಳೆದು ಹೋಗುತ್ತದೆ

ದಾಖಲೆಗಳು ನನ್ನ ಮತ್ತು ತಮ್ಮ ಎಲ್ಲಾ ನಿಲುವುಗಳನ್ನು ಇಲ್ಲಿ ಅಚ್ಚು ಮಾಡಿ ಇಟ್ಟುಬಿಡುತ್ತದೆ. ನಾವು ಇವತ್ತು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಯಾವುದು? ಯಾವ ವಿಚಾರವನ್ನು ಈ ಸದನದಲ್ಲಿ ನಾವು ಅತ್ಯಂತ ಗಂಭೀರವಾದ ವಿಷಯ ಅಂತ ಹೇಳಿ ಚರ್ಚೆ ಮಾಡುತ್ತಿದ್ದೇವೆ, ಯಾವ ವಿಷಯಕ್ಕೆ ಸಂಬಂಧಿಸಿದಂತೆ ಕೋರ್ಟ್ ಅಡ್‌ಜ್ಯುಡಿಕೇಟ್ ಮಾಡದೇ ಇರತಕ್ಕಂಥ ವಿಷಯಗಳನ್ನು ಕೂಡ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ರಾಜ್ಯಕ್ಕೆ ಅನ್ಯಾಯವಾಗಿದೆ ಎನ್ನತಕ್ಕಂಥ ವಾದವನ್ನೂ ಸಹ ನಾವು ಮಂಡಿಸಿದ್ದೇವೆ. ಸರ್ಕಾರದ ಸ್ಪಷ್ಟ ನಿಲುವನ್ನು ಉತ್ತರವನ್ನು ಬಯಸಿದ್ದೇವೆ. ಇವತ್ತೋ ಅಥವಾ ನಾಳೆಯೋ ಸರ್ಕಾರದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರತಿಪಾದಿಸಬೇಕಾಗಿದೆ. ಈ ಮಧ್ಯೆಂತರದಲ್ಲಿ ಸರ್ಕಾರ ತರಾತುರಿಯಲ್ಲಿ ಕೋರ್ಟ್‌ಗೆ ರಿವ್ಯೂ ಸಲ್ಲಿಸಿರತಕ್ಕಂಥಾದ್ದು it is not a paper statement. It is not reporting.

ಸರ್ಕಾರ ಆ ರಿವ್ಯೂ ಸಲ್ಲಿಸಿರತಕ್ಕಂಥಾದ್ದನ್ನು ಪತ್ರಿಕೆಗಳು ಅಚ್ಚು ಮಾಡಿದ್ದಾವೆ. The Government has file a civil review petition before the Supreme Court ಅಂತ ದಸ್ತಾವೇಜು ನಾವು ಏನು ಕೊಡಬೇಕು. Copy of the Petition ಅನ್ನು ಕೊಡಬೇಕು. ನೀವು ನಿನ್ನೆ ತಾನೆ ಫೈಲ್ ಮಾಡಿದ್ದೀರಿ. ಅದು ಸಿಕ್ಕಿದ ಮೇಲೆ ಅದನ್ನು ಕೂಡ, ತಾವು ಅಡ್ಮಿಟ್ ಮಾಡಿಕೊಂಡರೆ I will file that also ಯಾವುದೇ ಒಂದು ಕಮೀಷನ್ ಮುಂದೆ ನಮ್ಮ ಮಿನಿಷ್ಟರ್ ಮಾಡಿರತಕ್ಕಂಥ ಒಂದು ಸ್ಟೇಟ್‌ಮೆಂಟ್ ಪತ್ರಿಕೆಯಲ್ಲಿ ಬಂದಿದೆ ಎನ್ನತಕ್ಕಂಥಾದ್ದನ್ನು ಇದಕ್ಕೆ ಹೋಲಿಕೆಯಾಗಿ ಇಟ್ಟುಕೊಂಡರೆ, as a Minister for Law and Parliamentary Affairs, if you rely on that, and if you were to compare with this ಎಲ್ಲಿಗೆ ಹೋಗಬೇಕು ನಾವು? ಹಾಗಾದರೆ ಒಂದು ಕೆಲಸ ಮಾಡಿ. ನಾವು ನಿನ್ನೆ ಆ ತರಹದ ಯಾವುದೂ ರಿವ್ಯೂ ಪಿಟೀಷನ್ ಅನ್ನು ಫೈಲ್ ಮಾಡಿಲ್ಲ. ಪತ್ರಿಕೆಗಳವರಿಗೆ ಮಾಡುವುದಕ್ಕೆ ಕೆಲಸ ಇಲ್ಲ. ಅವರು ದಿವಸ ಏನಾದರೂ ಒಂದು ಬರೆಯುತ್ತಿರುತ್ತಾರೆ. ಅವರು ಬರೆದಿರುವುದಕ್ಕೂ ಅದಕ್ಕೂ ಸಂಬಂಧವಿಲ್ಲ ಅಂತ ಹೇಳಿಬಿಡಿ. ಅಥವಾ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಡಬೇಕು ಅಂತ ಇದ್ದಾರೆ, ಒಂದು ವೇಳೆ ಆ ಉತ್ತರಕ್ಕೂ ಈ ಸದನದಲ್ಲಿ ಒಟ್ಟು ರೂಪುಗೊಳ್ಳತಕ್ಕಂಥ ಚರ್ಚೆಯ ಫಲಿತಾಂಶಕ್ಕೂ ಮತ್ತೆ ನಾವು ಹಾಕಿರತಕ್ಕಂಥಾದ್ದಕ್ಕೂ, ರಿವ್ಯೂಗೂ ಸಂಬಂಧ ಇಲ್ಲದೇ ಹೋದರೆ ಮತ್ತೆ ನಾವು ಇನ್ನೊಂದು ಕಾರಿಜಂಡಂ ಹಾಕಿಕೊಳ್ಳುತ್ತೇವೆ. ಅಮೆಂಡ್‌ಮೆಂಟ್ ಫೈಲ್ ಮಾಡುತ್ತೇವೆ ಎಂದಾದರೂ ಹೇಳಿ. ನಾವು ನಿಮ್ಮನ್ನು ಕೇಳುತ್ತಾ ಇರತಕ್ಕಂಥಾದ್ದು ಏನು? ಅನೇಕ ಜನ ಮಾನ್ಯ ಸದಸ್ಯರುಗಳು ನಾವು ಈ ವಿಷಯವನ್ನು ಪ್ರಸ್ತಾಪ ಮಾಡುವ ವೇಳೆಗೆ

apart from the facts that have been raised by the hon. members by way of petition before the High Court or Supreme Court and what has been adjudicated, certain other issues have also been brought before this House by us. We are awaiting the reply of the government. We have taken different stand each one of us. The Government has to pronounce its stand. When the whole thing is pending what is the hurry?
ಲಿಮಿಟೇಶನ್ನು? ಹಾಗಾದರೆ ನಮಗೆ ಆ ವಿಷಯ ಹೇಳಿದ್ದರೆ ನಾವು ಮೊದಲೇ ಕನ್‌ಕ್ಲೂಡ್ ಮಾಡಬಹುದಾಗಿತ್ತು. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ನಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳದೇ, ನಮ್ಮ ಮನಸ್ಸನ್ನು ಅರ್ಥ ಮಾಡಿಕೊಳ್ಳದೇ ಎಲ್ಲಿ ಎಡವಿದ್ದೇವೆ ಎನ್ನುವುದನ್ನು ಸರಿ ಮಾಡುವುದಕ್ಕೆ ನಾವೆಲ್ಲರೂ ಒಟ್ಟಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತೆ ರಿವ್ಯೂ ಪಿಟೀಷನ್ ಹಾಕೋಣ ಎನ್ನವುದನ್ನು ಬಿಟ್ಟು ಮಾನ್ಯ ನಾಗಪ್ಪನವರ ಕೇಸನ್ನು ಇಟ್ಟುಕೊಂಡು ನಾನು ಅರ್ಗ್ಯು ಮಾಡುತ್ತೇನೆಂದರೆ. I will leave it to the judgement of the Hon'ble chair and to the House. Who is forwarding an argument for the sake of argument and where one has erred, I will leave it to your discretion. I don't want to insist upon it.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅವರು ಮೇಲ್ಮನವಿ ಸಲ್ಲಿಸುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಈ ಸದನ ಸರ್ವೋಚ್ಚ ಸದನ. ಮತ್ತು ಈ ಸದನದ ಹಕ್ಕುಚ್ಯುತಿಯಾಗುತ್ತದೆ. ಈ ಸದನ ನಡೆಯುವಾಗ, ಸದನದಲ್ಲಿ ಚರ್ಚೆಯಾಗುತ್ತಿರುವಾಗ ಇನ್ನೂ ಅನೇಕರು ಚರ್ಚೆ ಮಾಡಬೇಕಾಗಿದೆ, ಅನೇಕರು ಬೆಳಕು ಚೆಲ್ಲಿದ್ದಾರೆ. ಮತ್ತು ಮಾನ್ಯ ಮುಖ್ಯಮಂತ್ರಿಗಳ ಉತ್ತರಕ್ಕೆ ನಾವು ಕಾದಿದ್ದೇವೆ. ಇದು ಬಹಳ ಪ್ರಾಮುಖ್ಯ. ಮತ್ತು ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದೂ ಸಹ ತಾವು ಮುಖ್ಯಮಂತ್ರಿಗಳು ಉತ್ತರ ಕೊಡುತ್ತೀರಿ. ನೀವು ಒಂದು ಕಡೆ ಉತ್ತರ ಕೊಡುವುದಕ್ಕೂ ಮುಂಚೆ ನೀವು ಅಲ್ಲಿ ಹೋಗಿ ಮೇಲ್ಮನವಿ ಸಲ್ಲಿಸಿರತಕ್ಕಂಥಾದ್ದು ಈ ಸದನಕ್ಕೆ ನೇರವಾಗಿ ಹಕ್ಕುಚ್ಯುತಿಯಾಗುತ್ತದೆ. ಈ ಸದನ ಬಹಳ ಅತ್ಯಂತ ಎತ್ತರವಾದ ಸದನ. ಈ ಹಿಂದೆ ಅನೇಕರು ಇಲ್ಲಿ ಸಂಸದೀಯ ಸಚಿವರಾಗಿ ಕೆಲಸ ಮಾಡಿದ್ದಾರೆ. ಮಾನ್ಯ ರಾಯಚೂರು ಇದ್ದಾಗ ನಾಗಪ್ಪನವರ ನಾನೂ ಈ ಸದನದಲ್ಲಿದ್ದೆ. ಬಹುಶಃ ಗಂಭೀರತೆ ಈ ಸದನದ ಶಕ್ತಿ, ಈ ಸದನದ ಗಾಂಭೀರ್ಯತೆ ಇಲೆಲ್ಲಾ ಹೊರಟು ಹೋಗುತ್ತದೆ. ಒಂದು ಕಡೆ ನೀವು ಚರ್ಚೆ ಮತ್ತು ಮಾನ್ಯ

ಮುಖ್ಯಮಂತ್ರಿಗಳಿಂದ ಉತ್ತರ ಅಂತ ಇಟ್ಟುಕೊಂಡು ಮತ್ತೊಂದು ಕಡೆ ನಾವು ಡೆಲ್ಲಿ ಕೋರ್ಟ್‌ಗೆ ಹೋಗುತ್ತೇವೆ ನಾವು ಮೇಲ್ಮನವಿ ಸಲ್ಲಿಸುವುದಾದರೆ ಪರಿಸ್ಥಿತಿ ಅಷ್ಟು ಒಳ್ಳೆಯದಾಗುವುದಿಲ್ಲ. ಈ ಸದನಕ್ಕೆ ಅದು ನೇರವಾಗಿ ಹಕ್ಕುಚ್ಯುತಿಯಾಗುತ್ತದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ನಿಜವಾಗಿಯೂ ಮಾನ್ಯ ಎಂ.ಪಿ. ಪ್ರಕಾಶ್‌ರವರು ಏನು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಪತ್ರಿಕೆಯಲ್ಲಿ ಬಂದಿದ್ದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಪ್ರಿವಿಲೇಜ್ ಆಗಿ ಮಾಡುವುದಕ್ಕೆ ಬರುವುದಿಲ್ಲ ಅಂತ ಹೇಳಿ ಅದರ ಬಗ್ಗೆ ಮಾತನಾಡುತ್ತೇನೆ. ನಮ್ಮ ರಾಯಚೂರು ನಾಗಪ್ಪನವರು ಯಾವಾಗಲೂ ರಾಜ್ಯಾಂಗದ ಪಾಯಿಂಟ್ ಎತ್ತಿ ಮಾತನಾಡುತ್ತಿದ್ದರು. ಅವರು ಸೋಶಿಯಲಿಸ್ಟ್ ಪಾರ್ಟಿ ಲೀಡರ್. ಅವರು ಯಾವಾಗಲೂ ಪಾಯಿಂಟ್ ಆಫ್ ಆರ್ಡರ್ ಎತ್ತುವುದು, ರಾಜ್ಯಾಂಗಕ್ಕೆ ಸಂಬಂಧಪಟ್ಟ ಮ್ಯಾಟರ್ಸ್‌ನಲ್ಲಿ ಅವರು ಎಕ್ಸಪರ್ಟ್. ಅವರು ಒಳ್ಳೆಯ ವಕೀಲರು. ಅದನ್ನು ಆ ಸಂದರ್ಭದಲ್ಲಿ ಕೋಟ್ ಮಾಡಿ ಹೇಳಿದರು. ಪತ್ರಿಕೆಗಳಲ್ಲಿ ಬಂದಿದ್ದನ್ನು, ಇಲ್ಲಿ ನಾವು ಕೇವಲ ಪತ್ರಿಕೆಗಳಲ್ಲಿ ಬಂದಿದ್ದನ್ನು ನೋಡಿ ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದು ಅಲ್ಲ. ಅಥವಾ ಇಲ್ಲಿ ಪ್ರಸ್ತಾಪ ಮಾಡಿದ್ದು ಅಲ್ಲ. ತಾವು ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ರಿವ್ಯೂ ಪಿಟೀಷನ್ ಅನ್ನು ಫೈಲ್ ಮಾಡಿದ್ದೀರಿ. ಹೀಗೆ ಮಾಡಿಲ್ಲ ಅಂತ ಹೇಳಿಬಿಡಿ, ಒಪ್ಪಿಕೊಳ್ಳೋಣ ಇಲ್ಲ ಪತ್ರಿಕೆಯಲ್ಲಿ ಬಂದಿದೆ, ನಮಗೆ ಸಂಬಂಧವಿಲ್ಲ ಅಂದರೆ ಆ ಮಾತು ಬೇರೆ. ಆದರೆ ರಿವ್ಯೂ ಅರ್ಜಿ ತಾವು ಫೈಲ್ ಮಾಡಿ ಅದು ಡೆಕನ್‌ಹೆರಾಲ್ಡ್‌ನಲ್ಲಿದೆ, ಟೈಮ್ಸ್ ಆಫ್ ಇಂಡಿಯಾದಲ್ಲಿದೆ, ಬೇರೆಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಏನಂತ?

"The State Government on Monday filed a petition before the Supreme Court seeking review of its order of April 20th relating to the controversial Bangalore-Mysore four lane express way project and rehearing of the matter. The Petition follows a series of developments over the issue after the apex court cleared the project and imposed exemplary cost of Rs. 5 lakhs on the State Government for bringing the issue before it. The Karnataka Government's petition mentioned that Nandi Infrastructure Corridor Enterprise NICE Ltd. had secured 2,150 acres around Bangalore in excess of what was the actual required for the project.

This excess land at today's price was worth over Rs. 30,000 crores. If added. The excess land give to NICE would affect future generation and also result in a loss to the exchequer, the government submitted in the petition. According to the petition, NICE which is executing the project was a third party and as such, should not have secured the project. It should have nothing to do with the BMIC project." ಅಂದರೆ ಇದರಲ್ಲಿ ಏನು ಹೇಳಿದ್ದಾರೆ ಅದನ್ನು ನೋಡಿದಾಗ ನಾವಿಲ್ಲಿ ಚರ್ಚೆ ಮಾಡುವುದೇ ಒಂದು ಅಲ್ಲಿ ರಿವ್ಯೂ ಪಿಟಿಶನ್‌ನಲ್ಲಿ ಮಾಡಿದ್ದೇ ಒಂದು, ಅಂದರೆ ನಾವ್ಯಾಕೆ ಚರ್ಚೆ ಮಾಡಬೇಕು? ಯಾರಿಗೋಸ್ಕರ ಮಾಡಬೇಕು. ಮತ್ತೆ ನಿವ್ಯಾರಿಗೋಸ್ಕರ ಅನುಮತಿ ಕೊಟ್ಟಿರಿ? ರಾಜ್ಯದ ಹಿತದೃಷ್ಟಿಯಿಂದ ಒಂದು ಕಡೆ ಈ ಪ್ರಾಜೆಕ್ಟ್ ತೆಗೆದುಕೊಳ್ಳಬೇಕು ಮತ್ತು ಅವರು ಎಕ್ಸಸ್ ಲ್ಯಾಂಡ್ ಪಡೆದಿರುವುದನ್ನು ಸರ್ಕಾರ ವಾಪಸ್ ಪಡೆದುಕೊಳ್ಳಬೇಕು ಎಂಬ ವಾದ ಒಂದು ಕಡೆ ಮಾಡುತ್ತೀರಿ. ಇನ್ನೊಂದು ಕಡೆ ರಿವ್ಯೂ ಪಿಟಿಶನ್ ಫೈಲ್ ಮಾಡುತ್ತೀರಿ ಅದೂ ಮಂಡೆ; ಈ ಬಿಎಂಐಸಿ ನೋಟೀಸ್ ಮತ್ತು ಚರ್ಚೆ ನನ್ನ ಪ್ರಕಾರ 8–10 ದಿವಸದಿಂದ ನಡೆದಿದೆ. ಇದು ಗೊತ್ತಿದ್ದರೂ ನೀವು ಮಂಡೆ ದಿವಸ ತರಾತುರಿಯಿಂದ ಫೈಲ್ ಮಾಡಿ ಅಲ್ಲಿ ನಿಮ್ಮ ಸ್ಟ್ಯಾಂಡನ್ನು ಹೇಳುತ್ತೀರಿ ಇಲ್ಲಿ ಮತ್ತೆ ನಾವು ಚರ್ಚೆ ಮಾಡುವುದೇನಿದೆ? Whatever stand you have taken in your review petition, I think, that is the stand of the government. ಈ ಮಾತು ಹೇಳುವುದನ್ನು ನಮಗ್ಯಾಕೆ ಬಚ್ಚಿಟ್ಟಿರಿ? ಈ ಸದನದಿಂದ ಯಾಕೆ ಮುಚ್ಚಿಟ್ಟಿರಿ? ಇದನ್ನು ಮೊದಲೇ ಹೇಳಬೇಕಾಗಿತ್ತು ನಾವು ಹೀಗೆ ಹಾಕಬೇಕಾಗಿದೆ. ನಾವು ಹೇಳಿಕೆ ಮಾಡುತ್ತೇವೆ. ನಾವು ಸುಪ್ರೀಂಕೋರ್ಟಿಗೆ ಹೋಗಬೇಕು, ಬಹಳ ಅರ್ಜೆಂಟಿದೆ, ಟೈಂಬಾಂಡ್, ನಾವು ಹಾಕದಿದ್ದರೆ ನಾಳೆ ನಮಗೆ ಅಲೋ ಮಾಡುವುದಿಲ್ಲ ಪಿಟಿಶನನ್ನು, ಅದಕ್ಕಾಗಿ ನಾವು ಸುಪ್ರೀಂಕೋರ್ಟಿಗೆ ಹೋಗುತ್ತೇವೆ ಆದ್ದರಿಂದ before going to the Supreme Court, we will make a statement here and we will go ಅಂತ ಹೇಳಿ ನಮಗೆ ತಿಳಿಸಬೇಕಾಗಿತ್ತು. ಅದನ್ನು ಬಿಟ್ಟು ನಮಗೂ ತಿಳಿಸಲಿಲ್ಲ ಇಷ್ಟೊಂದು ಚರ್ಚೆಗೆ ಅವಕಾಶ ಮಾಡಿಕೊಟ್ಟಿರಿ, ಎಲ್ಲಾರನ್ನೂ ಕೇಳಿಕೊಂಡು ಕೂತಿರಿ. ಒಂದು ಫೈನ್‌ಮಾರ್ನಿಂಗ್ ಹೋಗಿ ಪಿಟಿಶನ್ ಫೈಲ್ ಮಾಡಿ ನಿಮ್ಮ ಸ್ಟಾಂಡ್ ಸಹ ಕ್ಲಿಯರ್ ಮಾಡಿದಿರಿ, 2100 ಎಕರೆ ಜಾಸ್ತಿ ಇದೆ, ನಂದಿ ಕಂಪನಿ ಏನಿದೆ ಅದು ಮೂರನೇ ಪಾರ್ಟಿ, ಅವರಿಗೆ ಸಂಬಂಧವಿಲ್ಲ, ಅವೇನೇನೋ ನೀವು

ಹೇಳಿಕೊಂಡಿದ್ದೀರಿ. ಹೀಗೆ ನೀವು ಹೇಳೋದೆ ಒಂದು; ಇಲ್ಲಿ ಚರ್ಚೆಯಾಗುವುದೇ ಒಂದು ಆದರೆ, ಇದು ಪ್ರಿವಿಲೇಜ್ ಆಗುವುದಿಲ್ಲ ಅಂತ ಮಾನ್ಯ ಪ್ರಕಾಶ್ ಹೇಳುತ್ತಾರಲ್ಲಾ ಅದು ಹೇಗೆ? ಸದನ ನಡೆಯದಿದ್ದರೆ ಆ ಮಾತು ಬೇರೆ, ಸದನ ನಡೆದಾಗ ಅದೂ ಚರ್ಚೆಗೆತ್ತಿಕೊಂಡಾಗ, ಇನ್ನೂ ಅನೇಕರು ಆ ವಿಷಯ ಮಾತನಾಡುವಾಗ ನೀವು ಈ ರೀತಿ ಅದನ್ನು ತೆಗೆದುಕೊಳ್ಳುತ್ತೀರಿ ಅಂದರೆ ನಿಜವಾಗಲೂ you are arguing a very bad case. You are a good lawyer. ನನಗೆ ಗೊತ್ತಿದೆ, ಒಳ್ಳೆಯ ವಕೀಲರಿದ್ದೀರಿ ಸಂಸದೀಯಪಟು ಇದ್ದೀರಿ, ಚೆನ್ನಾಗಿ ಮಾತನಾಡುತ್ತೀರಿ, ಅನೇಕ ಕೇಸ್‌ಲಾಗಳನ್ನು ರೆಫರ್ ಮಾಡಿದಿರಿ ಆದರೆ ಇದಕ್ಕೆ ನಿಮ್ಮ ಕೇಸ್‌ಲಾಗಳು ಅಪ್ಲಿಕಬಲ್ ಆಗುವುದಿಲ್ಲ. ಈ ಕೇಸಿಗೆ ನಿಮ್ಮ ವಾದ ಸತ್ಯಕ್ಕೆ ದೂರವಾದದ್ದು. ಅದಕ್ಕೆ ದಯವಿಟ್ಟು ತಾವು ಇದನ್ನು ಅಕ್ಸೆಪ್ಟ್ ಮಾಡಬೇಕು, ಇದನ್ನು ಪ್ರಿವಿಲೇಜ್ ಸಮಿತಿಗೆ ರೆಫರ್ ಮಾಡಿ; ಇದು ವೆರಿ ಸೀರಿಯಸ್, ನೀವೇ ಹೇಳಿ ಚರ್ಚೆ ಮಾಡುವಾಗ ಸುಪ್ರೀಂಕೋರ್ಟಿಗೆ ಹೋಗಿ ಫೈಲ್ ಮಾಡಬಹುದು ಇಲ್ಲಿ ಹೇಳಿಕೆ ಮಾಡುವುದಿಲ್ಲ ಅಂದರೆ...

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರೇ, ಇಲ್ಲಿ ಬರೀ ನಿಮ್ಮದೇ ಆಯ್ತು ನಮ್ಮ ಜಿಲ್ಲೆಯಲ್ಲಿ ಅಧಿಕವಾದ ಮಳೆ ಬಂದು ನಾವಲ್ಲಿ ಒದ್ದಾಡುತ್ತಿದ್ದೇವೆ ನಮಗೆ ಪರಿಹಾರ ಘೋಷಣೆ ಮಾಡಬೇಕು.

(ಗೊಂದಲ)

ಅಧ್ಯಕ್ಷರೇ, ಬೆಳಿಗ್ಗೆನೇ ತಮ್ಮ ಕಚೇರಿಗೆ ಬಂದು ಕೊಡಗು ಜಿಲ್ಲೆಯಲ್ಲಿ ಮಳೆಹಾನಿಯಿಂದ ಒಂದು ಕುಟುಂಬ ಸಂಪೂರ್ಣ ನಿರ್ನಾಮವಾಗಿದೆ, ಅದಕ್ಕೆ ಪರಿಹಾರ ಘೋಷಣೆ ಮಾಡಬೇಕು, ಎಂದು ವಿನಂತಿ ಮಾಡಿಕೊಂಡಿದ್ದೇನೆ. ಇನ್ಯಾವಾಗ ನಾವು ಮಾತನಾಡುವುದು? ಅವರು ಮಾತನಾಡುತ್ತಲೇ ಇರುತ್ತಾರೆ, ಅವರಿಗೆ ಅವಕಾಶ ಕೊಡಿ. ನಾನಲ್ಲದೆ ನನ್ನ ಜಿಲ್ಲೆ ಸಮಸ್ಯೆ ಯಾರು ಮಾತನಾಡುವುದು? ಈ ತರಹ ಆದರೆ ಸಾಧ್ಯಾನೇ ಇಲ್ಲ, ತಾವೂ ಯೋಚಿಸಿ ಬರೀ ಬಿಎಂಐಸಿನ ಅಥವಾ ಜಿಲ್ಲಾ ಸಮಸ್ಯೆನಾ?

ಅಧ್ಯಕ್ಷರು : ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದಾರೆ. ಈ ತರಹ ನೀವು ಕೂಗಾಡುವುದು ಸರಿಯಲ್ಲ. ಪ್ರಿವಿಲೇಜ್ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಿ. ದಯಮಾಡಿ ಸಹಕರಿಸಿ. ಅವರು ಹೇಳುವುದನ್ನೂ ಕೇಳಬೇಕಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನಿಮ್ಮ ಮುಂದೆ ನಾನಿದನ್ನು ಪ್ರಸ್ತಾಪಿಸಿದ್ದೇನೆ.

(ಈ ಹಂತದಲ್ಲಿ ಮಾನ್ಯ ಬಸವರಾಜು ಅವರು ಧರಣಿ ಪ್ರಾರಂಭಿಸಿದರು)

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಎಷ್ಟೇ ಗುರುತರವಾದಂಥ ಸಮಸ್ಯೆ ನೀವು ಎತ್ತಿ ಈ ತರಹ ನಡೆದುಕೊಂಡರೆ ನಾವು ಸರ್ಕಾರ ನಡೆಸಲು ಆಗುವುದಿಲ್ಲ. ದಯಮಾಡಿ ತಮ್ಮ ಆಸನಕ್ಕೆ ಹೋಗಿ.

ಅಧ್ಯಕ್ಷರು : ನೀವು ಹಿರಿಯ ಸದಸ್ಯರು, ಸಹಕರಿಸಿ.

(ಮಾನ್ಯ ಬಸವರಾಜು ಅವರು ಧರಣಿ ಅಂತ್ಯಗೊಳಿಸಿದರು)

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಒಂದು ವಿಷಯವನ್ನು ಎತ್ತಿಕೊಂಡಾಗ ಅಧ್ಯಕ್ಷರು ಅದಕ್ಕೊಂದು ಉತ್ತರ ಕೊಟ್ಟು ಅದು ಪರಿಸಮಾಪ್ತಿಯಾಗುವವರೆಗೂ ಮತ್ತೊಬ್ಬರು ಎಂಥದ್ದೇ ಗುರುತರ ಸಮಸ್ಯೆ ಇದ್ದರೂ ಕೂಡ ನಂತರ ಅವರ ಒಪ್ಪಿಗೆ ಪಡೆದು ಎತ್ತಬೇಕಾಗುತ್ತದೆ. ಎಲ್ಲರಿಗೂ ನೋವುಗಳಿವೆ. ತಾವೇನು ಕೊಡಗಿನ ವಿಚಾರದಲ್ಲಿ ಎತ್ತಿದ್ದೀರಿ, ಅದಕ್ಕೆ ಸಂಪೂರ್ಣ ಸ್ವಾಗತವಿದೆ. ಆದರೆ ತಮ್ಮ ಸಮಸ್ಯೆ ಇದೆ ಅಂತ ಎಲ್ಲರೂ ಭಾವಿಗೆ ಬರುವುದಾದರೆ, ನಡವಳಿಕೆಗಳಿಗೆ ಅಡ್ಡಿ ಆತಂಕ ಉಂಟು ಮಾಡಿದರೆ ಅಧ್ಯಕ್ಷರಿಗಾಗಲಿ ನನಗಾಗಲಿ ಇದನ್ನು ನಡೆಸಿಕೊಂಡುಹೋಗಲು ಕಷ್ಟವಾಗುತ್ತದೆ. ನಾನೇನೂ ದೊಡ್ಡ ಉಪದೇಶವನ್ನು ಮಾಡುತ್ತೇನೆಂದು ಹೇಳಿ ತಾವು ಭಾವಿಸಿಕೊಳ್ಳಬಾರದು. ನಿಮ್ಮದು ಬಹಳ ಗುರುತರವಾದಂಥ ಸಮಸ್ಯೆ ಇದೆ ಆದರೆ ಇದಕ್ಕಾಗಿ ಕಾಯಬೇಕು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಒಂದು ಪ್ರಶ್ನೆಗೆ ಉತ್ತರವನ್ನು ನಾವು ಕೊಡತ್ತೇವೆ. ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ. ಅಧ್ಯಕ್ಷರು ಇದರ ಬಗ್ಗೆ ಅಂತಿಮ ತೀರ್ಮಾನ ಕೊಡುತ್ತಾರೆ. ತೀರ್ಮಾನ ಆದಮೇಲೆ ಎಲ್ಲಾ ಸದಸ್ಯರು ತಮ್ಮ ತಮ್ಮ ಸಮಸ್ಯೆಗಳನ್ನು ಎತ್ತಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ಮುಗಿಸುತ್ತಿದ್ದೆ. ಮಾನ್ಯ ರಮೇಶ್‌ಕುಮಾರ್‌ರವರು ಎದ್ದಿದ್ದರಿಂದ ನಾನು ಕೂತೆ. ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಕೇವಲ ಪತ್ರಿಕೆ ಆಧಾರದಮೇಲೆ ಇದನ್ನು ಕೊಟ್ಟಂಥದ್ದಲ್ಲ. ಅವರಿಗೂ ಗೊತ್ತಿದೆ. ಇವತ್ತು ಸುಪ್ರೀಂ ಕೋರ್ಟಿನಲ್ಲಿ ಆ ರಿವ್ಯೂ ಪಿಟಿಷನನ್ನು ಹಾಕಿದ್ದಾರೆ. ಮತ್ತು ಅವರೇ ಕೂಡ ರುಜುವಾತು ಮಾಡಬಹುದು. ನಿಮ್ಮಲ್ಲಿ ಅದು ಇಲ್ಲವೆಂದು ತಕ್ಷಣವೇ ಆ ಫ್ಯಾಕ್ಟ್ ಇಲ್ಲ ಅಂತ ಅಲ್ಲ. The facts stands that the Review Petition is already filed before the Supreme Court. It is a fact. ಅದನ್ನು ಡಿನೈ ಮಾಡುತ್ತೀರಾ? ಅದು ಯಾವಾಗ ಡಿನೈ ಮಾಡುವುದಿಲ್ಲ ಅಂದಾಗ ಅದು ಸತ್ಯ. ಅದಕ್ಕಾಗಿ ತಾವು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ. ಇನ್ನು ಡೀಟೈಲ್ಸ್ ಹೇಳುವುದಕ್ಕೆ ಅವಕಾಶವನ್ನು ಕೊಟ್ಟರೆ ಬೇಕಾದರೆ ಎಲ್ಲಾ ಹೇಳಿಬಿಡೋಣ. ಆದರೆ ಒಂದೇ ಒಂದು

ಏನೆಂದರೆ ದಯವಿಟ್ಟು ಇಂಥ ಒಳ್ಳೆಯ ಕೇಸ್‌ಗಳಿಗೂ ತಾವು ರಿಜೆಕ್ಟ್ ಮಾಡಬೇಡಿ ಪ್ರಕಾಶ್‌ರವರೇ ಇದು ಒಳ್ಳೆಯ ಕೇಸ್. ಅದನ್ನು ತಾವು ನಾಗಪ್ಪನವರ ಕೇಸ್‌ಗೆ ಹೋಲಿಸಿ ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿಕೊಂಡು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಇದು ಗಂಭೀರವಾದ ಪ್ರಶ್ನೆ. ಅದು ಸದನದಲ್ಲಿ ಚರ್ಚೆ ನಡೆದಾಗ ಈ ವಿಷಯವನ್ನು ತೆಗೆದುಕೊಂಡಾಗ ನೀವಾಗೇ ತಂದಂಥದ್ದು. ನಾನು ಮತ್ತೆ ಹೇಳುತ್ತೇನೆ. ಅದನ್ನೂ ಕೂಡ ನಾನು ಹೇಳಬೇಕಾಗುತ್ತದೆ. ಈ ವಿಷಯ ಚರ್ಚೆಯಾಗಬೇಕೆಂದು ಹೇಳಿ ಕೂಡ ನಾನು ಹೇಳಬೇಕಾಗುತ್ತದೆ. ಈ ವಿಷಯ ಚರ್ಚೆಯಾಗಬೇಕೆಂದು ಹೇಳಿ ಆ ಕಡೆ ಸದಸ್ಯರೂ ಕೂಡ ಅಷ್ಟೇ ಅವೇಶದಿಂದ ಮಾತನಾಡಿದ್ದರು; ರಾಮಸ್ವಾಮಿಯವರು...

ಶ್ರೀ ಎಂ.ಪಿ. ಪ್ರಕಾಶ್ : ನಾವು ತಂದಂಥದ್ದಲ್ಲ. ಶ್ರೀರಾಮರೆಡ್ಡಿಯವರು ತಂದಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ನಾವೇ ತಂದಿರುವುದೆಂದು ತಿಳಿದು ಕೊಳ್ಳೋಣ. ಅದನ್ನು ನೀವು ಸ್ವಲ್ಪ ಎದೆಯಮೇಲೆ ಕೈ ಬಿಟ್ಟು ಹೇಳಿದರೆ ಸಾಕು. ಅದನ್ನು ನಾನು ಬೇರೆ ಹೇಳುವುದಿಲ್ಲ. ಅದಕ್ಕೆ ನಾವೇ ತಂದಿದ್ದೇವೆ. ಏನು ಉದ್ದೇಶದಿಂದ? ಇದು ಸರಿಯಾಗಿ ಚರ್ಚೆಯಾಗಬೇಕು. ಇದಕ್ಕೇನಾದರೂ ಒಂದು ಉತ್ತರ ಕಂಡುಹಿಡಿಯಬೇಕು. ಇದರಿಂದೇನಾದರೂ ಪ್ರಯೋಜನವಾಗಬೇಕೆನ್ನುವ ದೃಷ್ಟಿಯಿಂದ ಮಾಡಿದ್ದು. ಆದರೆ ಇದನ್ನು ಬಿಟ್ಟು ಇವತ್ತು ನೀವೇ ಒಂದು ಸ್ಟಾಂಡ್ ತೆಗೆದುಕೊಂಡು ಗೌರ್ನಮೆಂಟ್‌ಗೆ ರಿವ್ಯೂ ಪಿಟಿಷನನ್ನು ಫೈಲ್ ಮಾಡಿದಮೇಲೆ ಇದಕ್ಕೆ ಬಿಲ್ ತರುತ್ತೇವೆಂದು ಹಿಂದೆ ಚರ್ಚೆಯನ್ನು ಮಾಡಿದ್ದೀರಿ. ನಿಮ್ಮ ಸಲಹೆಗಳನ್ನು ಪಡೆದುಕೊಂಡು ನಾವು ಮಾಡುತ್ತೇವೆಂದು ಹೇಳಿದ್ದೀರಿ. ಅದೆಲಾ ಎಲ್ಲಿ ಹೋದವು? ಅದಕ್ಕೆ ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಯನ್ನು ಮಾನ್ಯ ಶ್ರೀರಾಮರೆಡ್ಡಿಯವರು ತಂದು ಅನಂತರ ನಿಯಮ 69ಕ್ಕೆ ವರ್ಗಾವಣೆಯಾಗಿ ಇಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಪ್ರಕಾಶ್‌ರವರ ಮಾತನ್ನು ಒಪ್ಪಬೇಕಾಗುತ್ತದೆ. Routine business of the Government cannot be questioned. ಆದರೆ ಇದೊಂದು ವಿಶೇಷ ಪ್ರಕರಣ ಪ್ರಕಾಶ್‌ರವರೇ. ಈ ಮನೆಯಲ್ಲಿ ಎಲ್ಲರೂ ಸಾರ್ವತ್ರಿಕವಾಗಿ ಚರ್ಚೆಯಲ್ಲಿ ಭಾಗಿಗಳಾಗಿದ್ದೇವೆ. ಅದೂ ಚರ್ಚೆ ಅಪೂರ್ಣವಾಗಿದ್ದಾಗ ತಾವು ಉತ್ತರ ಕೊಡುವ ಮೊದಲೇ ತಮ್ಮ ಅಭಿಪ್ರಾಯವನ್ನು ಬೇರೆ ರೀತಿ ಬೇರೆ ಕಡೆ ಎಕ್ಸ್‌ಪ್ರೆಸ್ ಮಾಡುವುದು ಈ ಮನೆಗೆ ಅಷ್ಟೊಂದು ಗೌರವ ತರುವಂಥದ್ದಲ್ಲ. whether it amounts to privilege of not. ಡೆಲಿಬರೇಷನ್ಸ್‌ನಲ್ಲಿರುವಾಗ ನಾವು ನೀವು

ಉತ್ತರ ಕೊಡುವುದನ್ನು ಕಾಯುತ್ತಿರಬೇಕಾದರೆ ನೀವೇನು ನಿಮ್ಮ ಉತ್ತರವನ್ನೇ ಕೊಡುತ್ತೀರಾ, ಸಮಗ್ರವಾಗಿ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ಕೊಡುತ್ತೀರಾ, ಅದು ನಿಮ್ಮ ಉತ್ತರದ ಮೂಲಕ ಈ ಮನೆಯಲ್ಲಿ ಮೊದಲು ವ್ಯಕ್ತವಾಗಬೇಕು. ಆ ನಂತರ ನೀವು ಬೇರೆ ರೀತಿಯಲ್ಲಿ ವ್ಯಕ್ತಮಾಡಬೇಕು. ಒಂದು ಪಕ್ಷ ಈ ರಿವ್ಯೂ ಪಿಟಿಷನನ್ನು ನೀವು ಡೆಲಿಬರೇಷನ್ಸ್‌ನ್ನು ಸ್ಟಾರ್ಟ್ ಆಗುವುದಕ್ಕೆ ಮೊದಲೇ ಹಾಕಸುತ್ತಿದ್ದೇವೆಂದು ಏನಾದರೂ ಡಿಫೆನ್ಸ್ ತೆಗೆದುಕೊಳ್ಳುವುದಾದರೆ ಉತ್ತರ ಹೇಳಬೇಕಾದರೆ ನಾವು ರಿವ್ಯೂನಲ್ಲಿದ್ದೇವೆ, ಟಿಲ್ ಕೋರ್ಟ್ ಡಿಸಿಷನ್, ನಾವೇನೂ ಹೇಳುವುದಕ್ಕಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಅಷ್ಟಕ್ಕೋಸ್ಕರ 4–5–6 ದಿವಸ ಈ ಸಭೆಯನ್ನು ನಡೆಸಬೇಕಾಗುತ್ತಾ ಎಂದು ನಾವು ಕೇಳಬೇಕಾಗುತ್ತದೆ. ನಾನೇನು ಸಲಹೆ ಮಾಡುತ್ತೇನೆ, ಪ್ರಿವಿಲೇಜ್ ಆಗುತ್ತೆ, ಬಿಡುತ್ತೆ ಚರ್ಚೆಗಿಂತ ಹೆಚ್ಚಾಗಿ ತಾವು ದಯಮಾಡಿ ತಮ್ಮ ವಕೀಲರಿಗೊಂದು ಸೂಚನೆಯನ್ನು ಕೊಟ್ಟು ಈ ಮನೆಯಲ್ಲಿ ಈ ವಿಷಯ ಇತ್ಯರ್ಥವಾಗುವವರೆಗೆ ಏನಾದರೂ ಮಾಡಿ ಅದನ್ನು ಮುಂದಕ್ಕೆ ಹಾಕಿಸಿದರೆ ನಮಗೆಲ್ಲಾ ಗೌರವ ತರುತ್ತದೆ. ನಾನು ಫೈಲ್ ಮಾಡಿದ್ದೇನೆ. It is my individual capacity. ನಾನು, ಶ್ರೀರಾಮರೆಡ್ಡಿಯವರೂ ಕೂಡ ಈ ರಿವ್ಯೂವನ್ನು ಫೈಲ್ ಮಾಡಿದ್ದೇವೆ. ನಾವೇನು ಯಾರಿಗೆ ಕೇಳಿ ಹಾಕಬೇಕು, ಮಾಡಬೇಕು ಎನ್ನುವ ಹಾಗಿಲ್ಲ. ನನ್ನ ಮೇಲೆ ಅಲ್ಲೇನು ಪ್ರಸ್ತಾಪವಾಗಿತ್ತು, ಅದನ್ನು ಎಕ್ಸ್‌ಪಂಜ್ ಮಾಡಿ ಎಂತಲೊ ಏಂಟೈರ್ ಥಿಂಗನ್ನೇ ರಿವ್ಯೂ ಮಾಡಿ ಎಂತಲೋ ನನ್ನ ಕೆಪಾಸಿಟಿಯಲ್ಲಿ I have instructed my advocate to file a Review petition. But as Government. ನೀವೇನು ಮಾಡುತ್ತೀರಿ? ಏಕೆ? ಇದರಿಂದ ಒಳ್ಳೆಯದಾಗುವುದಕ್ಕಿಂತ ಕೆಟ್ಟದ್ದಾಗುವ ಲಕ್ಷಣಗಳೇ ಜಾಸ್ತಿಯಾಗುತ್ತವೆ. ಹೋದ ಸಾರಿ ನೀವು ಹಾಕಿದ್ದ ಅಫಿಡವಿಟ್ ಬಗ್ಗೆ ನಾನು ಮಾತನಾಡುವಾಗ ಹೇಳಿದೆ. ನಮ್ಮ ಪರವಾಗಿ ಬಂದು ಹಾಕಿದಿರೋ, ನಿಮ್ಮ ಪರವಾಗಿ ನಿಮ್ಮದೇ ಹಾಕಿಕೊಂಡರೂ ನಮ್ಮನ್ನು ಅಲ್ಲಿ ಸಿಕ್ಕಿಸಿ ಹಾಕಿಬಿಡ್ತು ಇವರೆಲ್ಲಾ ಸೇರಿ ಪಿತೂರಿ ಮಾಡಿ ಹೈಕೋರ್ಟ್ ಮುಂದೆ ಬಂದಿದ್ದಾರೆ ಎನ್ನುವ ಹಾಗೆ ನಾವು ತಪಿತಸ್ಥರಾಗಬೇಕಾಯಿತು. ಈಗಲೂ ನಾನು ರಿಕ್ವೆಸ್ಟ್ ಮಾಡುತ್ತೇನೆ. ಪ್ರಿಸ್ಟೀಜ್‌ಗೆ ಹೋಗುವುದು ಬೇಡ. ರಿವ್ಯೂ ಪಿಟಿಷನ್ ನೀವು ಹಾಕುವುದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. It is your bonafide right. ಆದರೆ ಈ ಸಭೆ ಪೂರ್ಣವಾದ ಮೇಲೆ ನೀವು ಕೋರ್ಟ್ ಮುಂದೆ ಈ ಸಭೆಯ ಅಭಿಪ್ರಾಯವನ್ನೂ ತೆಗೆದುಕೊಂಡು, ಸರ್ಕಾರದ ಅಭಿಪ್ರಾಯವನ್ನು ಹೇಳಿ ರಿವ್ಯೂ ಪಿಟಿಷನನ್ನು ಹಾಕುವುದು ಒಳ್ಳೆಯದು. ಯೋಚನೆ ಮಾಡಿ. ಅಕಸ್ಮಾತ್ ಅದು ಕೋರ್ಟು ಮುಂದೆ ಇನ್ನು ಅಡ್ಮಿಟ್ ಆಗದೇ ಹೋದರೆ, you can necessarily ask the Supreme Court to postpone the admission of the review petition ಹಾಗೇನಾದರೂ ಒಂದನ್ನು ತಾವು ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, I am a signatory. ಒಂದು ನಿಮಿಷ ಅವಕಾಶ ಕೊಡಿ. I will not take more time. ಈಗಾಗಲೇ ಈ ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಸಂಸದೀಯ ವ್ಯವಹಾರಗಳ ಮಂತ್ರಿಗಳ ಇದು routine job. ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ ಎನ್ನುವಂಥ ಮಾತನ್ನು ಹೇಳಿ ಪತ್ರಿಕೆಯಲ್ಲಿ ಬಂದಿದ್ದೆಲ್ಲವನ್ನೂ ಕೂಡ ನಾವು ಪ್ರಿವಿಲೇಜ್ ಎಂದು ಹೇಳುವುದಕ್ಕಾಗುವುದಿಲ್ಲವೆಂದು ಉದಾಹರಣೆಯನ್ನು ಕೂಡ ಕೊಟ್ಟಾಯಿತು. ಆದರೆ ದಯಮಾಡಿ ಅರ್ಥಮಾಡಿಕೊಳ್ಳಬೇಕಾಗುತ್ತದೆ ಸಂಸದೀಯ ಮಂತ್ರಿಗಳು, where in the middle of the discussion. ಈ ವಿಚಾರವನ್ನು ಸದನದಲ್ಲಿ ಕಳೆದ ಐದಾರು ದಿನಗಳಿಂದ ಚರ್ಚೆಯಾಗುತ್ತಾ ಇದೆ. ಹಾಗಾದರೆ ನಾವೇನೆಂದು ಈಗ ಚರ್ಚೆಯನ್ನು ಮಾಡಬೇಕು? ಸರ್ಕಾರ ನಾಳೆ ಏನೆಂದು ಉತ್ತರವನ್ನು ಹೇಳುತ್ತದೆ ಗೊತ್ತಾ? ಈಗಾಗಲೇ ನಾವು ರಿವ್ಯೂ ಪಿಟಿಷನನ್ನು ಹಾಕಿದ್ದೇವೆ, ರಿವ್ಯೂ ಪಿಟಿಷನ್ ಹಾಕಿದ್ದರಿಂದ ಏನು ಜಡ್ಜ್‌ಮೆಂಟ್ ಬರುತ್ತದೆ ಎಂದು ಕಾಯ್ದುನೋಡೋಣವೆಂದು ಹೇಳಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯ ಇದೆ. ಈ ಸದನವನ್ನು ಅವರು ಗಣನೆಗೆ ತೆಗೆದುಕೊಳ್ಳಲಿಲ್ಲ. ಮತ್ತು ಅದರ ಜೊತೆಗೆ ಒಂದು ಮಾತನ್ನು ಹೇಳಿದರು ಮಾನ್ಯ ಸಂಸದೀಯ ಮಂತ್ರಿಗಳು. It does not amounts to privilege. ಆಗುವುದಿಲ್ಲ, ಆದರೆ ಬ್ರೀಚ್ ಆಫ್ ಟ್ರಸ್ಟ್ ಆಗುತ್ತದೆ ಎನ್ನುವ ಮಾತನ್ನು ತಾವು ಹೇಳಿದಿರಿ. Please see that. ತಾವು ಹೇಳಿದಿರಿ. ಬ್ರೀಚ್ ಆಫ್ ಟ್ರಸ್ಟ್ ಆಗುತ್ತದೆನ್ನುವ ಮಾತನ್ನು ಹೇಳಿದಿರಿ.

Sri M.P. Prakash : Breach of courtesy. It is a breach of courtesy. Not trust. ಇಲ್ಲಿ ಟ್ರಸ್ಟ್ ಹೇಗೆ ಬರುತ್ತದೆ?

Sri Basavaraja Rayareddy : Sorry. I admit. ನೀವು ಹೇಳಿದ್ದು ಬ್ರೀಚ್ ಆಫ್ ಕರ್ಟಸಿ. ನಾನು ಒಪ್ಪಿಕೊಂಡೆ. I have taken back that word. ಬ್ರೀಚ್ ಆಫ್ ಕರ್ಟಸಿ ಎಂದು ಹೇಳಿದಿರಿ. what is the meaning of breach of courtesy? Breach of courtesy itself is a breach of privilege. ಅಂದರೆ ಸದನಕ್ಕೆ ತಿಳಿಸುವಂಥ ಕನಿಷ್ಟ ಸೌಜನ್ಯವನ್ನು ತೋರಿಸಿಲ್ಲವೆಂದರೆ that itself is in Privilege ಆದಕ್ಕಾಗಿ ಇದನ್ನು ದಯಮಾಡಿ ಪ್ರಿವಿಲೇಜ್ ಮೋಷನ್‌ಗೆ ಅಲೋ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ) : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹಕ್ಕುಚ್ಯುತಿ ಮಂಡನೆ ಮಾಡಿದ್ದಾರೆ. ಸಮಯ ಬಿಟ್ಟು. ಆದರೆ

ಅವರು ಪ್ರಸ್ತಾವನೆ ಮಾಡುವುದಕ್ಕೆ ಮೊದಲು ಹಕ್ಕುಚ್ಯುತಿ ಮಂಡನೆ ಮಾಡುವ ಮೊದಲು ಈ ದಿನ ನೈಸ್ ಕಂಪನಿ ಬಗ್ಗೆ ಚರ್ಚೆಯಾಗುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರದ ಉತ್ತರ, ಏಕೆ ನೀವು ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿಯನ್ನು ಸಲ್ಲಿಸಿದಿರಿ ಎಂದು ಕೇಳುಬಹುದಾಗಿತ್ತುಲ್ಲವೇ? ಹಕ್ಕು ಚ್ಯುತಿಯನ್ನೇ ಮಂಡಿಸಿ ಕೇಳುವಂಥದ್ದು ಏನಿದೆ ಸರ್ಕಾರವನ್ನು ಕೇಳಬಹುದಾಗಿತ್ತು. ಏಕೆ ಹಾಕಿದ್ದೀರಿ? ಇಲ್ಲವೋ? ಪತ್ರಿಕೆಯಲ್ಲಿ ಬಂದಿದೆ. ಈ ರೀತಿ ಆಗಬಾರದೆಂದು ಕೇಳಬಹುದಾಗಿತ್ತಲ್ಲವೆ? ಹಕ್ಕುಚ್ಯುತಿ ಮಂಡನೆ ಮಾಡಿ ಸರ್ಕಾರ ಹಾಗೆ ಮಾಡಿದೆ, ಹೀಗೆ ಮಾಡಿದ ಅವಮಾನ ಆಗಿದೆ, ಹೀಗೆ ಆಗಿದೆ ಎಂದು ಹೇಳುವ ಬದಲು ನೇರವಾಗಿ ಸರ್ಕಾರಕ್ಕೆ ಕೇಳಬಹುದಾಗಿತ್ತು. ಏಕೆ ಮಾಡಿದ್ದೀರಿ? ಏನು? ಎಂದು ಕೇಳಬಹುದಾಗಿತ್ತು.

Sri M. Mallikarjuna Kharge : I request you to give ruling on that. I beg up you to give a ruling. ಪಾಪ, ಪದೇ ಪದೇ ಎದ್ದು ಮಾತನಾಡುತ್ತಾರೆ. ಒಂದು ಸಾರಿ ಖಾಯಂ ಆಗಲಿ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ, ಏನು ಹಕ್ಕುಚ್ಯುತಿಯನ್ನು ನಮ್ಮ ವಿರೋಧಪಕ್ಷದ ನಾಯಕರು ಮಂಡನೆ ಮಾಡಿದ್ದಾರೆ, ಇವತ್ತು ಕೋರ್ಟ್‌ನಲ್ಲಿ ಕೇಸ್ ಆಗಿದ್ದರೆ ನಾಳೆ ಅವರು ಉತ್ತರ ಕೊಡುವಾಗ ಏನು ಹೇಳುತ್ತಾರೆ, ಸಬ್‌ಜ್ಯುಡೀಸ್ ಆಗುತ್ತದೆ, ಆದ್ದರಿಂದ ಚರ್ಚೆಗೆ ಬರುವುದಿಲ್ಲವೆನ್ನುವ ಮಾತನ್ನು ಹೇಳಬಹುದು ಎಂದೆ. ನಾನು ಆಗುತ್ತದೆಂದು ಹೇಳಲಿಲ್ಲ. ಅವರು ಹೇಳಲಿಕ್ಕೆ ಇದನ್ನು ಉತ್ತರ ಕೊಡುವುದಕ್ಕೆ ನುಣುಚಿಕೊಳ್ಳುವುದಕ್ಕೆ ಇದೂ ಒಂದು ಕಾರಣವನ್ನು ಕೊಡಬಹುದು ಎಂದು ಅನುಮಾನವಿದೆ. ಆದ್ದರಿಂದ ಈ ಹಕ್ಕುಚ್ಯುತಿಗೆ ದಯವಿಟ್ಟು ಅವಕಾಶವನ್ನು ಮಾಡಿಕೊಡಿ. ನಾನೂ ಕೂಡ ಒಬ್ಬ ಸಿಗ್ನೇಟರಿಯಾಗಿರುವುದರಿಂದ ಇದರ ಮೇಲೆ ಪೂರ್ತಿ ಬೆಳಕನ್ನು ಚೆಲ್ಲುವಂಥ ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ನನ್ನ ಮಾತನ್ನು ಪೂರ್ಣ ಮಾಡಿರಲಿಲ್ಲ. ಹಿರಿಯ ಮುಖಂಡರುಗಳು ಮಾತನಾಡುವುದಿತ್ತು. ನಮ್ಮಲ್ಲೂ ನಾವು ಒಂದು ಸೌಜನ್ಯವನ್ನು ಇಟ್ಟುಕೊಳ್ಳುತ್ತೇವೆ. ಪ್ರಸ್ತಾವನೆ ಮಾಡಿ ಮತ್ತೆ ಅವರಿಗೆ ಅವಕಾಶವನ್ನು ಕೊಡುತ್ತೇವೆ. ನಾನು ಮಾತನಾಡುವ ವೇಳೆಗೆ I have made a reference to the letter written by Hon'ble formere Prime Minister of India to the Governor of Karnataka ಇದೊಂದು ಹೊಸ ಪದ್ಧತಿ. ಒಂದು ಪ್ರಜಾಸತ್ತಾತ್ಮಕವಾದಂಥ ಆಡಳಿತ ಇರಬೇಕಾಗಿದ್ದರೆ, ಒಬ್ಬ ಮುಖ್ಯಮಂತ್ರಿ

ಇರಬೇಕಾಗಿದ್ದರೆ ಗೌರ್ನರ್‌ಗೆ ಪತ್ರ ಬರೆಯತಕ್ಕಂಥದ್ದು ಒಂದು ಹೊಸ ವಿಷಯ ಆ ಕರೆಸ್ಪಾಂಡೆನ್ಸ್ ಏನಿದೆ, ಅದನ್ನು ನಮ್ಮ ಸದನದ ಮುಂದಿಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಂಡಿದ್ದೇನೆ. ಇವೊತ್ತು as I see the newspapers XX

Sri M.P. Prakash : Sir, I am on a point of order.

ಶ್ರೀ ಆರಗ ಜ್ಞಾನೇಂದ್ರ : ರಾಜ್ಯಪಾಲರ ಬಗ್ಗೆ ಟೀಕೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ರಾಜ್ಯಪಾಲರ ನಡವಳಿಕೆ ಬಗ್ಗೆ ಇಲ್ಲಿ ಚರ್ಚಿಸುವುದು ಸರಿಯಲ್ಲ.

Sri K.R. Ramesh Kumar : I leave it to the chair. You have provided the opportunity for me.

ಅಧ್ಯಕ್ಷರು : ನಿಯಮದಲ್ಲಿ ರೆಫರೆನ್ಸ್ ಮಾಡಿದ್ದೀರಿ, ಆದರೆ, ರಾಜ್ಯಪಾಲರ ನಡವಳಿಕೆ ಬಗ್ಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಡವಳಿಕೆ ಅಲ್ಲ....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ರಾಜ್ಯಪಾಲರ ನಡವಳಿಕೆ ಆಧರಿಸಿ...

ಅಧ್ಯಕ್ಷರು : ಮಾನ್ಯ ಸದಸ್ಯರು ಅವರ ನಡವಳಿಕೆ ಬಗ್ಗೆ ದಯಮಾಡಿ ಇಲ್ಲಿ ಮಾತನಾಡಬಾರದು.

ಶ್ರೀ ಎಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾಗಿರುವ ರಮೇಶ್‌ಕುಮಾರ್‌ರವರು ಮಾತನಾಡುತ್ತಾ, ಈ ಒಂದು ವಿಷಯದಲ್ಲಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆಂದು ಏನು ಸದನದ ಮುಂದಿಟ್ಟಿದ್ದಾರೆ, ಅದಕ್ಕೆ ನಾನು ಉತ್ತರ ಕೊಡಬೇಕಾದರೆ ಹೇಳುತ್ತೇನೆ. ಮಾಜಿ ಪ್ರಧಾನ ಮಂತ್ರಿಗಳು ರಾಜ್ಯಪಾಲರಿಗೆ ಈಗ ಯಾವುದೇ ಲೆಟರ್‌ಗಳನ್ನು ಬರೆದಿಲ್ಲ. ಆ ಪ್ರಶ್ನೆ ಉದ್ಭವವಾಗುವುದಿಲ್ಲದೇ ಇಲ್ಲ. ರಾಜ್ಯಪಾಲರಿಗೆ ಮಾಜಿ ಪ್ರಧಾನಮಂತ್ರಿಗಳು ಪತ್ರಗಳನ್ನು ಬರೆದಿದ್ದಾರೆಂದು ಅವರು ಏನು ಆಪಾದನೆ ಮಾಡಿದ್ದಾರೆ, ಆ ಸನ್ನಿವೇಶವೇ ಇಲ್ಲದಿದ್ದಾಗ ಅದರ ಬಗ್ಗೆ ಚರ್ಚೆ ಮಾಡುವುದು ಅನಗತ್ಯ. ನಾನು ಈ ಒಂದು ಜಾಗದಿಂದ ಕೆಲಸ ಮಾಡತಕ್ಕಂಥ ದಿನದಿಂದಲೂ ನೋಡುತ್ತಿದ್ದೇನೆ. ಇವೊತ್ತು ನನಗೆ ಕಾನೂನು ಮತ್ತು ಸದನದ ಹಲವಾರು ವಿಷಯಗಳ ಬಗ್ಗೆ ಇನ್ನೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅವರು ಶ್ರೀ ರಮೇಶ್‌ಕುಮಾರ್‌ರವರು ಸದನದ ಅಧ್ಯಕ್ಷರಾಗಿ ಐದು ವರ್ಷಗಳ ಕಾಲ ಉತ್ತಮವಾಗಿ ಏನು ಕೆಲಸ ಮಾಡಿದ್ದಾರೆ, ಅದನ್ನು ನಾನು ಸದನದ ಹೊರಗಡೆಯಿಂದ ನೋಡಿದ್ದೇನೆ. ಇವೊತ್ತು ಅವರು ರಾಜ್ಯಪಾಲರ ಬಗ್ಗೆ ಏನು ಮಾತನಾಡುತ್ತಿದ್ದಾರೆ, ಅದನ್ನು

XXಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅವರ ತೀರ್ಮಾನಕ್ಕೆ ಬಿಡುತ್ತೇನೆ. ಈ ಒಂದು ವಿಷಯದಲ್ಲಿ ಮಾಜಿ ಪ್ರಧಾನಮಂತ್ರಿಗಳು ಕಾಗದವನ್ನೇ ಅವರಿಗೆ ಬರೆಯದಿದ್ದ ಸನ್ನಿವೇಶ ಇದೆ; ಅವರಿಗೆ ಯಾರು ಹೇಳಿದರೋ ಗೊತ್ತಿಲ್ಲ. ಅದನ್ನು ಸಭೆ ಮುಂದಿಟ್ಟಿದ್ದಾರೆ ನಾನು ಉತ್ತರ ಕೊಡುವ ಸನ್ನಿವೇಶದಲ್ಲಿ ಹೇಳಲು ತಯಾರಿದ್ದೇನೆ. ಅದರ ಜೊತೆಗೆ ಸನ್ಮಾನ್ಯ ಶ್ರೀರಾಮರೆಡ್ಡಿಯವರು ಏನು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದಾರೆ, ಈ ಸದನದ ಮುಂದೆ ತಂದಿರತಕ್ಕಂಥ ವಿಚಾರ, 69ನೇ ನಿಯಮದ ಪ್ರಕಾರ ಈ ಬಿಎಂಐಸಿ ಪ್ರಾಜೆಕ್ಟ್ ನಡೆದುಕೊಂಡು ಬಂದಿರುವ ದಾರಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರು 69ನೇ ನಿಯಮದ ಪ್ರಕಾರ ಇವೊತ್ತು ಏನು ಈ ಸದನದಲ್ಲಿ ಚರ್ಚೆ ಪ್ರಾರಂಭ ಮಾಡಿದ್ದಾರೆ, ಈ ಚರ್ಚೆ ಕಳೆದ ಏಳೆಂದು ದಿವಸಗಳಿಂದ ಮಾಡುತ್ತಿದ್ದೇವೆಂದು ಸನ್ಮಾನ್ಯ ಹಿರಿಯ ಸದಸ್ಯರು ಏನು ಇಲ್ಲಿ ವ್ಯಕ್ತಪಡಿಸಿದ್ದಾರೆ, ನಾನು ಈ ವಿಷಯದಲ್ಲಿ ಗಂಭೀರವಾಗಿ ಕುಳಿತು ಎಲ್ಲರ ಭಾವನೆಗಳು, ಇವೊತ್ತು ಯಾರ್ಯಾರು ಯಾವ್ಯಾವ ರೀತಿಯಲ್ಲಿ ಮಾತನಾಡಿದ್ದಾರೆಂಬುದನ್ನು ಇಲ್ಲಿ ನೋಡಿದ್ದೇನೆ. ಅವರು ಇಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿರುವುದನ್ನು ನೋಡಿದ್ದೇನೆ. ಸನ್ಮಾನ್ಯ ಶ್ರೀರಾಮರೆಡ್ಡಿಯವರು 69ನೇ ನಿಯಮಾವಳಿ ಪ್ರಕಾರ ಇದು ನಡೆದು ಬಂದಿರುವ ದಾರಿ ಬಗ್ಗೆ ಗಮನ ಸೆಳೆಯುವುದಕ್ಕೆ ಈ ಚರ್ಚೆ ಮಾಡುವುದಕ್ಕೆ ಅಧ್ಯಕ್ಷರಾದ ತಾವು ಅನುವು ಮಾಡಿಕೊಟ್ಟಿದ್ದೀರಿ; ಬಹುಶ: ಸದನದ ಎಲ್ಲಾ ಹಿರಿಯ ಸದಸ್ಯರು ಬಿಎಂಐಸಿ ಪ್ರಾಜೆಕ್ಟ್‌ನ ಹನ್ನೊಂದು ವರ್ಷಗಳ ಕರ್ಮಕಾಂಡ ಏನಿದೆ, ಅದರ ಬಗ್ಗೆ ಮಾತನಾಡಿದ್ದಾರೆ. ನಾನು ಇವೊತ್ತಿನ ದಿವಸ ಇದಕ್ಕೆ ಹೊಸಬ. ಆದರೆ, ಇಲ್ಲಿರತಕ್ಕಂಥ, ಆ ಭಾಗದಲ್ಲಿರತಕ್ಕಂಥವರು, ಇಲ್ಲಿರತಕ್ಕಂಥವರು, ಹಲವಾರು ಜನರು, ಹಲವಾರು ಸದಸ್ಯರುಗಳು ಇವೊತ್ತು 11 ವರ್ಷಗಳ ಈ ಬಿಎಂಐಸಿ ಪ್ರಾಜೆಕ್ಟ್ ಕಾಮಗಾರಿ ಬಗ್ಗೆ ಹಲವಾರು ರೀತಿಯಲ್ಲಿ ವಿಷಯಗಳನ್ನು ಏನು ಕ್ರೋಢೀಕರಿಸಿದ್ದಾರೆ, ಆ ವಿಷಯಗಳನ್ನು ಕ್ರೋಢೀಕರಿಸುವುದರ ಮೂಲಕ ಇವೊತ್ತು ಏನು ಸದನದಲ್ಲಿ ಬಿಎಂಐಸಿ ಪ್ರಾಜೆಕ್ಟ್ ವಿಷಯದ ಮುಖಾಂತರ ಕರ್ನಾಟಕದಲ್ಲಿ ಬಂಡವಾಳ ಹೂಡತಕ್ಕಂಥಾದ್ದಕ್ಕೆ ಇವೊತ್ತು ವಿರೋಧ ಮಾಡತಕ್ಕಂಥಾದ್ದು, ಕರ್ನಾಟಕದಲ್ಲಿರುವ ಕೆಲವರು ಬಂಡವಾಳಶಾಹಿಗಳ ವಿರುದ್ಧ ಚರ್ಚೆ ಮಾಡುತ್ತಾರೆನ್ನುವ ಕೆಲವು ಭಾವನೆಗಳೇನಿವೆ, ಅದಕ್ಕೆ ಇವೊತ್ತು ಸಂಪೂರ್ಣವಾಗಿ ಉತ್ತರ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ.

ಇವೊತ್ತು ಶ್ರೀರಾಮರೆಡ್ಡಿಯವರು ತಂದಿರುವ ನಿಲುವಳಿ ಸೂಚನೆ ಏನಿದೆ, ಈ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಇವೊತ್ತು ಚರ್ಚೆ ನಡೆಸುತ್ತಿದ್ದೇವೆ. ನಿನ್ನೆ ದೇಶಪಾಂಡೆಯವರು ಹಲವಾರು ವಿಷಯಗಳನ್ನು ಸುಪ್ರೀಂಕೋರ್ಟ್, ಹೈಕೋರ್ಟ್‌ನ ಹಲವಾರು ತೀರ್ಪುಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ಇವೊತ್ತು ಸರ್ಕಾರಕ್ಕೆ ಐದು

ಲಕ್ಷ ರೂಪಾಯಿಗಳ ಕಾಸ್ಟ್ ಹಾಕಿರತಕ್ಕಂಥಾದ್ದು, ಮಾಧುಸ್ವಾಮಿಯವರಿಗೆ, ಶ್ರೀರಾಮರೆಡ್ಡಿಯವರಿಗೆ ದಂಡ ಹಾಕಿರತಕ್ಕಂಥಾದ್ದು, ಇದೆಲ್ಲಾ ಏನಿದೆ, ಈ ವಿಷಯಗಳ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಸರ್ಕಾರ ಕಾನೂನು ಪಂಡಿತ ಹಾಗೂ ಕಾನೂನು ತಜ್ಞರ ಅಭಿಪ್ರಾಯವನ್ನು ಕ್ರೋಢಿಕರಿಸಿ ಕ್ರಮ ಕೈಗೊಂಡಿದೆ. ಸರ್ಕಾರ ಯಾರಿಗೂ ಸರ್ಟಿಫಿಕೇಟ್ ಕೊಟ್ಟು ಮೆಚ್ಚಿಸಬೇಕಾಗಿಲ್ಲ. ಇದರ ಗಂಭೀರತೆಯನ್ನು ಇವರು ತಿಳಿದುಕೊಳ್ಳಬೇಕು. ಇವೊತ್ತು ನಿಜಕ್ಕೂ ಜನಪ್ರತಿನಿಧಿಗಳಾದ ನಾವು ಕೆಲಸ ಮಾಡಬೇಕಾದರೆ, ಈ ಬಿಎಂಐಸಿ ಪ್ರಾಜೆಕ್ಟ್ ವಿಷಯದಲ್ಲಿ ಇವೊತ್ತು ಒಂದು ಕಡೆ ಕಾನೂನಿನ ಚೌಕಟ್ಟಿನಲ್ಲಿ ನಾವು ತಲೆಬಾಗಬೇಕಾಗಿದೆ. ಮತ್ತೊಂದು ಕಡೆ ಜನರ ಅಭಿಪ್ರಾಯಗಳಿಗೆ ನಾವು ಅವರ ಪರವಾಗಿ ಹೋರಾಟ ಮಾಡಬೇಕಾಗಿದೆ. ಇವೆರಡರ ಮಧ್ಯದಲ್ಲಿ ಇವೊತ್ತು ನಾವು ಇದ್ದೇವೆ; ಇವೊತ್ತು ಕಾನೂನಿನ ಆ ಒಂದು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾದರೆ, ಈ ಸದನದ ಸದಸ್ಯರಾಗಿ ನಾವೇನು ಕೆಲಸ ಮಾಡುತ್ತೇವೆ, ಈ ರಾಜ್ಯದ ಜನರ ಕಸ್ಟೋಡಿಯನ್ಸ್ ನಾವೆಲ್ಲರೂ ಆಗಿದ್ದೇವೆ. ನಾನೊಬ್ಬನೇ ಅಲ್ಲ, ಈ ಸರ್ಕಾರ ಅಲ್ಲ. ಇಲ್ಲಿರತಕ್ಕಂಥ 224 ಸದಸ್ಯರು ಈ ರಾಜ್ಯದ ಕಸ್ಟೋಡಿಯನ್ಸ್ ಏನಿದ್ದಾರೆ, ಇವೊತ್ತು ಈ ವಿಷಯದಲ್ಲಿ...

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿ. ದಂಡ ಹಾಕಿಲ್ಲ, ಕಾಸ್ಟ್ ಹಾಕಿದೆ. ಮುಖ್ಯಮಂತ್ರಿಗಳಾದ ನೀವು ನಮಗೆ ದಂಡ ಹಾಕಿದ್ದಾರೆಂದರೆ, ಅದು ರೆಕಾರ್ಡ್‌ಗೆ ಹೋದರೆ, ನಮ್ಮ ಗತಿ ಏನು? ದಂಡ ಅಲ್ಲ, ಸರ್. ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್.ಡಿ. ಕುಮಾರಸ್ವಾಮಿ : 'ದಂಡ' ಎನ್ನುವ ಪದವೇನಿದೆ, ನಾನು ಮಾತನಾಡುವ ಸನ್ನಿವೇಶದಲ್ಲಿ ಏನು ಪದ ಬಳಸಿದ್ದೇನೆ, ಅದನ್ನು 'ಕಾಸ್ಟ್' ಎಂದು ನಾನು ಪರಿವರ್ತನೆ ಮಾಡಿಕೊಳ್ಳುತ್ತಿದ್ದೇನೆ. ಇವೊತ್ತು ಆ ದೃಷ್ಟಿಯಿಂದ ಪ್ರಿವಿಲೇಜ್ ಮೋಷನ್ ಬರತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಸರ್ಕಾರ ಇವೊತ್ತು ಕಾನೂನು ತಜ್ಞರ ಅಭಿಪ್ರಾಯದ ಮೇರೆಗೆ ನಾವು ಸರ್ಕಾರ ಆಡಳಿತ ನಡೆಸಬೇಕಾದರೆ, ನಾವೇನು ಕೆಲವು ತೀರ್ಮಾನಗಳನ್ನು ಮಾಡಬೇಕಾಗುತ್ತದೆ, ಅದನ್ನು ಆಡಳಿತಾತ್ಮಕ ದೃಷ್ಟಿಯಿಂದ ನಾವು ಕ್ರಮ ತೆಗೆದುಕೊಂಡಿದ್ದೇವೆ, ಇವೊತ್ತು ನಾವೇನು ಅಲ್ಲಿ ರಿವ್ಯೂ ಪಿಟಿಶನ್ ಸಲ್ಲಿಸಿದ್ದೇವೆ, ಆ ರಿವ್ಯೂ ಪಿಟಿಶನ್ ವ್ಯಾಪ್ತಿ ಏನಿದೆ, ನನಗೂ ಇಲ್ಲ, ಸದನದ ಸದಸ್ಯರಿಗೆ ಇಲ್ಲ. ಅಲ್ಲಿ ಒಂದು ತೀರ್ಮಾನ ಏನಾಗುತ್ತದೆ, ಅದು ಅಲ್ಲಿಗೆ ಬಿಟ್ಟ ವಿಚಾರ. ನಾವು ಇಲ್ಲಿ ಕಳೆದ ಎಂಟು ದಿವಸಗಳಿಂದ ಚರ್ಚೆ ಮಾಡುತ್ತಿರತಕ್ಕಂಥ ವಿಷಯ ಈ ಹನ್ನೊಂದು ವರ್ಷಗಳಲ್ಲಿ ಬಿಎಂಐಸಿ ಪ್ರಾಜೆಕ್ಟ್ ನಡೆದು ಬಂದಿರುವ ದಾರಿ ಬಗ್ಗೆ. ಇವೊತ್ತು ಸರ್ಕಾರ ಅದರ ಬಗ್ಗೆ ಇಲ್ಲಿ ಗಮನಕ್ಕೆ ತರಲಿಲ್ಲ, ಇದು

ಪ್ರಿವಿಲೇಜ್ ಮೋಷನ್ ಆಗುತ್ತದೆಂದು ಮಂಡನೆ ಮಾಡಬೇಕೆಂದು ಏನು ಹೇಳುತ್ತಾರೆ, ಅದು ಅಪ್ರಸ್ತುತ. ತಾವು ಇದರ ಬಗ್ಗೆ ತೀರ್ಮಾನ ಕೊಡಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸನ್ಮಾನ್ಯ ರಾಜ್ಯಪಾಲರ ಕುರಿತಾಗಿ ನಾನು ಯಾವುದೇ ಭ್ರಷ್ಟಾಚಾರದ ಆರೋಪ ಮಾಡಿಲ್ಲ. ಅಧಿಕಾರ ದುರುಪಯೋಗದ ಆರೋಪ ಮಾಡಿಲ್ಲ, ವೈಯಕ್ತಿಕ ಚಾರಿತ್ರ್ಯದ assassination ಮಾಡತಕ್ಕಂಥ ಪ್ರಯತ್ನ ಮಾಡಿಲ್ಲ. ನಿಮ್ಮ ರಿವ್ಯೂ ಪಿಟಿಶನ್‌ನಲ್ಲಿ ಅವರ credentials ಮೇಲೆ ನೀವು ಆಧಾರಪಟ್ಟಿರುವುದರಿಂದ ಅವರ credentials ಏನು ಎನ್ನುವ ವಿಚಾರವನ್ನು ಮಾತ್ರ ವಾಸ್ತವಾಂಶ ಏನಿತ್ತು ದೇಶಕ್ಕೆ ಗೊತ್ತಿರುವ ಸತ್ಯವೆಂದು ಅಷ್ಟನ್ನು ನಾನು ಹೇಳಿದ್ದೇನೆ. ನೀವು ಅದಕ್ಕೆ ಉದ್ರಿಕ್ತರಾಗಬೇಕಾಗಿಲ್ಲ. ನಾನೇನು ಹೇಳಿದ್ದೇನೆ.

ಅಧ್ಯಕ್ಷರು : ಸನ್ಮಾನ್ಯ ರಾಜ್ಯಪಾಲರ ಬಗ್ಗೆ ಮಾತನಾಡಿರುವುದನ್ನು ಕಡತದಿಂದ ತೆಗೆದುಹಾಕಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಈಗ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಸ್ವಲ್ಪ ವಿಷಯಾಂತರ ಮಾಡತಕ್ಕಂಥಾದ್ದಲ್ಲ. ಚರ್ಚೆ ಪ್ರಾರಂಭವಾಗಿದೆ ಚರ್ಚೆ ಮುಗಿಯಲಿ. ತಾವು ಅದಕ್ಕೆ ಉತ್ತರ ಕೊಡಿ. ಆದಕಾರಣ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇವೊತ್ತು ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಬಹಳಷ್ಟು ವಿವರವಾಗಿ ಮೊದಲಿನಿಂದಲೂ ಇದರ ಕರ್ಮಕಾಂಡ ಏನಿದೆ you have got the liberty. ನಾವು ಏನೇನು ಪ್ರಸ್ತಾಪ ಮಾಡಿದ್ದೇವೆ, ಅದರ ಬಗ್ಗೆ ಹೇಳಬಹುದು, ನಾನೂ ಕೂಡ ಹೇಳುತ್ತೇನೆ. ಪತ್ರಿಕೆಯಲ್ಲಿ ಬಂದಿದೆ ಎನ್ನುವ ಒಂದೇ ಪ್ರಶ್ನೆ ಇವತ್ತು ಸದನದ ಮುಂದೆ ಇರುವಂಥದ್ದು. ಪತ್ರಿಕೆಯಲ್ಲಿ ಬಂದಿರುವುದನ್ನು deny ಮಾಡಿ. ಸದನ ನಡೆಯುವ ಕಾಲದಲ್ಲಿ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀವು Supreme Court ಗೆ review ಹೋಗತಕ್ಕಂಥದ್ದು ರೀತಿ ಎಂದೂ ಆಗಿಲ್ಲ. ಹುಬ್ಬಳ್ಳಿಯ ಈದ್ಗಾದಲ್ಲಿ ಏನಾಯಿತು, ಏನು ಮಾಡಿದಿರಿ, ಅಲ್ಲಿಯ ವಿಚಾರ Supreme Courtಗೆ ಬರುತ್ತಿತ್ತು. ನಾವೆಲ್ಲರೂ ಕೂಡ ತಮ್ಮ ಜೊತೆಯಲ್ಲಿ ಚರ್ಚೆ ಮಾಡಿ, ನಾವು Supreme Courtಗೆ ಹೋಗುತ್ತೇವೆಂದು ತಾವು ಹೇಳಿದಿರಿ. ಅದೇ ರೀತಿ ಇಲ್ಲಿ ಸದನ ನಡೆಯುತ್ತಿದೆ, ಪ್ರಸ್ತಾಪ ಮಾಡುತ್ತಿದ್ದೇವೆ. ಪ್ರಸ್ತಾಪ ಮಾಡುವ ಕಾಲದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲವೆನ್ನುವ ಇವೆರಡು ಪ್ರಶ್ನೆಗಳು ನಮ್ಮ ಮುಂದಿದ್ದು, ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು. Supreme Court ಗೆ review ಗೆ ಹೋಗಿರುವುದರಿಂದ ಇದು ಇಲ್ಲಿ ಹೇಗೆ ಚರ್ಚೆಯಾಗುವುದಕ್ಕೆ ಆಗುತ್ತದೆ? That will become a

subjudice. ಈಗಾಗಲೇ Supreme Court judgement ಕೊಟ್ಟಿದೆ. ಅದರ ಬಗ್ಗೆ ಚರ್ಚೆಯಾಗುತ್ತಿದೆ. Contempt ಬಗ್ಗೆ we are not going. ಅದೆಲ್ಲಾ ವಿಷಯ ಇದ್ದಮೇಲೆ ಇವತ್ತು ಮಾಡುತ್ತಿದ್ದೀರಿ. ಸದನ ನಡೆಯುವ ಕಾಲದಲ್ಲಿ Supreme Court ಗೆ review petition ಏನು ಹಾಕಿದ್ದೀರಿ, ಅದು ತಪ್ಪು ಎಂದು ಹೇಳಿ, ಇಲ್ಲವೆಂದರೆ ತಪ್ಪಿಲ್ಲ ಎಂದು ಹೇಳಿ.

(ಗೊಂದಲ)

Sri M.P. Prakash : I will come back to you.ಪ್ರಸ್ತಾಪ ಮಾಡಿರುವ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗುತ್ತದೆ. ತಾವು ಮಾತನಾಡಿದ್ದೀರಿ. ಅದಾದನಂತರ ಬೇರೆ ಮಾನ್ಯ ಸದಸ್ಯರುಗಳೂ ಕೂಡ ಮಾತನಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಉತ್ತರ ಕೊಡುತ್ತಿದ್ದೀರಿ ಎಂದ ಮೇಲೆ ಅದರಲ್ಲಿ ನನ್ನ ಪ್ರಶ್ನೆಗೆ ಸಹ clarification ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಏಕೆಂದರೆ ನೀವು Privilege Committee ಗೆ refer ಮಾಡಿ ಎಂದು ಹೇಳಿದಿರಿ. Privilege Committee ಗೆ refer ಮಾಡಿ ಎಂದು ನೀವು ಹೇಳಿದಾಗ ಇದರ urgency ನಿಮಗಿಲ್ಲವೆಂದು ಅದರ ಅರ್ಥವಾಯಿತು. ಶ್ರೀ ರಮೇಶ್‌ಕುಮಾರ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಈ ಕೂಡಲೆ ತತಕ್ಷಣದಲ್ಲಿ Rule.191ರ ಕೆಳಗೆ ಚರ್ಚೆಗೆ ಹಾಕಬೇಕೆಂದು ಹೇಳಿದಾಗ, ತಾವು ಇದನ್ನು Privilege Committeeಗೆ ತೆಗೆದುಕೊಳ್ಳಬೇಕೆಂದು ಹೇಳಿದಿರಿ. ಆದ್ದರಿಂದ ನಿಮ್ಮಲ್ಲಿಯೇ ಸರಿಯಾದ ಒಂದು ಒಮ್ಮತ ಅಭಿಪ್ರಾಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಮ್ಮತ ಅಲ್ಲ. No. I am very sorry. Don't divide.

Sri M.P. Prakash : I will come back to you.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಅಲ್ಲ. Ruling is very clear. We make a mention of this immediately after the question hour. It is up to the Speaker's Discretion to allow a discussion instantaneously or refer the matter to the Privilege Committee...

Sri M.P. Prakash : If you are agreeable for referring to a Committee..

Sri K.R. Ramesh Kumar : It is not my agreement. It is his willingness.

Sri M.P. Prakash : No. That is what I am telling. With regard to the admissibility of the motion itself, I have taken an objection and you have also rightly commented that it has been filed about after 10 or 15 minutes after the commencement of discussion. It is also there..

(ಗೊಂದಲ)

Sri K.R. Ramesh Kumar : Decision is yours. Your decision is binding.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷತೆ, ನಮ್ಮ ಪ್ರಶ್ನೆ ಇಷ್ಟೆ. ಸದನದಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಈಗಾಗಲೇ ಎಲ್ಲಾ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ಬಗ್ಗೆ ತಾವು review petitionಗೆ ಹಾಕಿದ್ದೀರಿ. ಅಂದರೆ first information ಯಾರು? The entire public outside the Assembly, Assembly ಗೆ ಇಲ್ಲ. Assembly ಹೊರಗಡೆ ಇರುವ ಜನರಿಗೆ, Supreme Court ಗೆ ಎಲ್ಲರಿಗೂ ಕೂಡ ನಿಮ್ಮ ಮನಸ್ಸಿನಲ್ಲೇನಿದೆ, ನೀವು ಏನು ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ, ಆ ಮಾಹಿತಿಯನ್ನು ಹೊರಗಡೆ ಜನರಿಗೆ ತಿಳಿಸಿದಿರಿ, Supreme Court ಗೆ ತಿಳಿಸಿದ್ದೀರಿಯೇ ಹೊರತಾಗಿ ಇಲ್ಲಿ ಈ ಸದನದ ಸದಸ್ಯರಿಗೆ ತಿಳಿಸಿಲ್ಲ. ಇದು breach of privilege ಆಗುವುದಿಲ್ಲವೇ? ಎರಡನೆಯದಾಗಿ, ಒಂದು ಸಾರಿ ನಿಮ್ಮ Stand ಅಲ್ಲಿ ಹೇಳಿದ ಮೇಲೆ ಇನ್ನು ಇಲ್ಲಿ ಏನು ಹೇಳುತ್ತೀರಿ? ಇಲ್ಲಿ ಕೂಡ same ಹೇಳಬೇಕಾಗುತ್ತದೆ. ಮತ್ತೆ ನಮಗೆ ಚರ್ಚೆ ಏತಕ್ಕೆ? ನಾವು paper ನಲ್ಲಿ ಬಂದಿದ್ದನ್ನು ನೋಡಿಕೊಂಡು ಅಥವಾ ನೀವು ಕೊಟ್ಟಿದ್ದ petition circulate ಮಾಡಿದರೆ ಓದಿಕೊಂಡು ಸುಮ್ಮನೆ ಇರುತ್ತೇವೆ. ಈ ಚರ್ಚೆ ಏತಕ್ಕೆ ಬೇಕು? ಸಾಧಕಬಾಧಕ ಏಕೆ ಬೇಕು? 'ನಿಮ್ಮೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಒಳ್ಳೆಯದು ಏನಾಗುತ್ತದೆ, ಈ ರಾಜ್ಯಕ್ಕೆ ಒಳ್ಳೆಯದು ಮಾಡತಕ್ಕಂಥದ್ದು, ಬಂಡವಾಳ ಹೂಡಿಸತಕ್ಕಂಥದ್ದು, investment ಮಾಡಿಸತಕ್ಕಂಥದ್ದಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾವೆಲ್ಲರೂ ಕೂಡ ನಡೆದುಕೊಂಡು ಹೋಗಬೇಕಾಗುತ್ತದೆ, ಇದು ನಮ್ಮೆಲ್ಲರ ಜವಾಬ್ದಾರಿ' ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಎಲ್ಲರ ಜವಾಬ್ದಾರಿ ಎಂದು ಹೇಳಿದ ಮೇಲೆ ನೀವೊಬ್ಬರೇ ಜವಾಬ್ದಾರಿ ತೆಗೆದುಕೊಂಡು review petition file ಏಕೆ ಮಾಡಿದಿರಿ? ಇದರ ಬಗ್ಗೆ ಏನು ಎಂದು ಸದನವನ್ನು ಕೇಳಬೇಕಾಗಿತ್ತು. ಎಲ್ಲರ opinion ಕೇಳಿದ ಮೇಲೆ ನೀವು ಒಂದು ತೀರ್ಮಾನಕ್ಕೆ ಬಂದು, ಇಲ್ಲ, ಇದು ಸರ್ಕಾರದ ನಿರ್ಧಾರ ಇದೆ. ಈ ರೀತಿಯಾಗಿ ನಾವು Supreme Courtನಲ್ಲಿ ಹಾಕುತ್ತೇವೆ, ಈ ರೀತಿಯಾಗಿ ಕಾನೂನು ಮಾಡುತ್ತೇವೆಂದು ಹೇಳಿದರೆ, ಮಾಡಿ. ನಿಮಗೆ ಅಧಿಕಾರವಿದೆ. ನಿಮಗೆ ಯಾವುದು ಒಳ್ಳೆಯದೆನಿಸುತ್ತದೆ, ಅಥವಾ ನಿಮ್ಮ ದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ನಿಮಗೆ ಅನುಕೂಲವಾಗುವಂಥದ್ದು. ನೀವು convince ಆಗಿರುವುದನ್ನೇ ಮಾಡಿ. ಆದರೆ ನಮಗೆ ತಿಳಿಸಬೇಕಲ್ಲವೇ? ಈಗ ಚರ್ಚೆ ನಡೆದಿದೆ. ಬೇರೆ ಎಲ್ಲರೂ ಊಟ ಮಾಡಿದ ಮೇಲೆ ನಮಗೆ ಎಂಜಲು ಬಡಿಸಿದ ಹಾಗೆ ಆಗುತ್ತದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ನೀವು ಇದಕ್ಕೂ ಕೂಡ ಒಪ್ಪುತ್ತಿಲ್ಲ. glaring mistake ಇದ್ದರೂ ಕೂಡ ನೀವು defend ಮಾಡುತ್ತಿದ್ದೀರಿ ಮತ್ತು ಅವರು ಸರಿ ಎಂದು ಹೇಳುತ್ತಿದ್ದಾರೆ. ಅದರಲ್ಲೇನೆಂದರೆ 'ಮೊಸರಿನಲ್ಲಿ ಕಲ್ಲು ಹುಡುಕಿದ ಹಾಗೆ Privilege Committeeಗೆ refer ಮಾಡವುದಕ್ಕೆ ಏನೂ urgent ಇಲ್ಲ. ಅಂದರೆ ಓಡಿಹೋಗಬೇಕೆಂದು ಮಾಡಿದ್ದೀರಾ? ಸಮಸ್ಯೆ ಬಗೆಹರಿಸಬೇಕೆಂದು ನಾವು ಎಲ್ಲರೂ ಇಲ್ಲಿ ಸೇರಿದ್ದೇವೋ ಅಥವಾ ಇದರಿಂದ ನುಣುಚಿಕೊಂಡು ಹೋಗುವುದಕ್ಕೆ ಸೇರಿದ್ದೇವೂ ಎನ್ನುವುದು ನನಗೇನೂ ಅರ್ಥವಾಗುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಚರ್ಚೆಯಾಗುತ್ತಿದ್ದಂಥ ಸಂದರ್ಭದಲ್ಲಿ petition ಹಾಕಿರುವುದು ಆರೋಗ್ಯಕರವಾದ ಬೆಳವಣಿಗೆ ಅಲ್ಲವೆಂದು ಮಾನ್ಯ ಮಾಧುಸ್ವಾಮಿಯವರು ಒಂದು ಸಲಹೆ, ಅಭಿಪ್ರಾಯವನ್ನು ನೀಡಿದ್ದಾರೆ. ಅದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಅದನ್ನು ಯಾರೂ deny ಮಾಡಲಿಕ್ಕೆ ಸಾಧ್ಯವಿಲ್ಲ. ಅದರ ಜೊತೆಯಲ್ಲಿಯೇ ಅವರು ಮಾಡಿರತಕ್ಕಂಥದ್ದು, petition file ಮಾಡುವುದಕ್ಕೆ last date ಇವತ್ತು. ಅದಕ್ಕೆ limitation ಇದೆ. ಆ ಉದ್ದೇಶದಿಂದ ಬಹುಶಃ ಅವರು ಮಾಡಿರಬಹುದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಆ ರೀತಿಯಲ್ಲಿ ಒಂದು ನಿಮಿಷದಲ್ಲಿ ಅವರು ಹೇಳಬಹುದಾಗಿತ್ತಲ್ಲವೇ? They could have taken us into confidence.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದು ನಿಮಿಷ ಇರಿ ಸಾರ್. ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು Adjournment Motion ತಂದಿದ್ದು ಯಾವಾಗ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರುವುದು ಸರಿಯಿಲ್ಲವೆಂದು ನಾನು ಹೇಳುವುದಿಲ್ಲ. Limitation ಇರಬಹುದು. ಅದನ್ನು ನಿನ್ನೆಯ ದಿವಸವೇ ಸರ್ಕಾರ ಹೇಳಬಹುದಾಗಿತ್ತಲ್ಲವೇ? ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆನ್ನುವುದನ್ನು ಕೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, Rule 69 ಅಡಿಯಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ನಾನೂ ಕೂಡ ನಿನ್ನೆ ಅರ್ಧ ಮಾತನಾಡಿದ್ದೇನೆ. ನಿನ್ನೆ ಅದನ್ನು ಅವರು ಹೇಳಬಹುದಾಗಿತ್ತಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ...ದಯವಿಟ್ಟು ಕ್ಷಮಿಸಿ. ಸರ್ಕಾರದವರು ಏಕೆ ಹೇಳಲಿಲ್ಲ, ಈ ರೀತಿ ಹೇಳಿ ಎಂದು ನಾನು ಹೇಳುತ್ತಿಲ್ಲ. That is not my business. I am only telling my opinion. ನನ್ನ ಅಭಿಪ್ರಾಯವನ್ನು ಹೇಳಿದನಷ್ಟೆ. ಮಾಡಬಹುದು, ಬಿಡಬಹುದು ಅದು ಅವರಿಗೆ ಬಿಟ್ಟ ವಿಚಾರ. ಆದರೆ ಆ review petition file ಮಾಡಿರತಕ್ಕಂಥದ್ದು ಸರಿಯಾದ ಕ್ರಮವಲ್ಲವೆನ್ನುವುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಅವರಿಗೆ ಈಗೊಂದು option ಇದೆ. ಆ review petition ಅನ್ನು ಇದು final ಆಗುವವರೆಗೆ ನೀವು admit ಮಾಡಬೇಡಿ ಎಂದು ಅವರು Supreme Courtಗೆ request ಮಾಡಬಹುದು.

Shri K.R. Ramesh Kumar : There is nothing like admission so far as review petition is concerned. ಒಂದು ಸಂದರ್ಭದಲ್ಲಿ ಒಬ್ಬ Judge ಒಂದು ತೀರ್ಮಾನವನ್ನು ಕೊಟ್ಟಾದಮೇಲೆ, ಅವರಿಗೆ ಪುನರ್‌ವಿಮರ್ಶೆಗೆ review petition ಕೊಟ್ಟರೆ ಅದರ ಅರ್ಥವೇನೆಂದರೆ, ಅವರು he will go through the petition. ಯಾವುದಾದರೂ issues ಅನ್ನು ಇವರು mention ಮಾಡಿದ್ದನ್ನು ನಾನು answer ಮಾಡಿಲ್ಲವೇ ಎಂದು ನೋಡಿಕೊಳ್ಳಬೇಕು.

ನ್ಯಾಯ ಕೊಡುವುದರಲ್ಲಿ ಎಲ್ಲಾದರೂ ಹೆಚ್ಚುಕಡಿಮೆ ಆಗಿದೆಯೆಂದು ಅವರಿಗೆ ಅವರ chambers ನಲ್ಲಿ ಮನವರಿಕೆಯಾದರೆ ಅವರು he can re-post it and serve notice to the concerned parties. There is nothing like admission of review petition. It is a mercy.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು review petition ಮಾಡಿರುವುದು ತಪ್ಪು ಎಂದು ಒಂದು ಕಡೆಯಾದರೆ, ಅದು privilege ಆಗುತ್ತದೆನ್ನುವುದು ಇನ್ನೊಂದು ಕಡೆ. ಇವತ್ತು last date ಆದ್ದರಿಂದ ಸರ್ಕಾರ ಅದನ್ನು ಉಳಿಸಿಕೊಳ್ಳಬೇಕೆಂದು ಏನೋ ಒಂದು idea ಮಾಡಿದ್ದಾರೆಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರು. You could have taken the decision to review the petition. ಈಗ ಎಲ್ಲೋ ಒಂದು ಕಡೆ ಗಲಾಟೆ ಆಗುತ್ತದೆ. S.P. ಯವರು ಹೇಳಿಲ್ಲ, ಅವರ ಮೇಲೆ ಚರ್ಚೆ ಮಾಡುತ್ತಿರುವ ಸಮಯದಲ್ಲಿ transfer ಆಗುತ್ತದೆ. ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ತಾವು ನಮಗೆ ಅವಕಾಶ ಕೊಟ್ಟಿದ್ದೀರಿ. BMIC ಮೇಲೆ ನಾವು ಚರ್ಚೆ ಮಾಡಬೇಕು. ಸದನ ಒಳಗಡೆ ನಮ್ಮ ಎಲ್ಲರ suggestion ಕೊಡಬೇಕೆಂದು ಹೇಳಿದ ಮೇಲೆ ತಮಗೆ suggestion ಕೊಡುವುದಕ್ಕೆ ನಾವೆಲ್ಲರೂ ready ಆಗಿದ್ದೆವು. ಎಲರೂ ನಿಮ್ಮ ಜೊತೆಗೆ ಸೇರಿ ಒಂದು legislation pass ಮಾಡಿ ಯಾವುದಾದರೂ ಒಂದು ರೀತಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆನ್ನುವುದಕ್ಕೆ ನಾವು ready ಆಗಿದ್ದೆವು. ಇಂಥ ಸಂದರ್ಭದಲ್ಲಿ ಮತ್ತೆ revive ಮಾಡಿಕೊಳ್ಳುವುದು ಏತಕ್ಕೆ? ಅದಕ್ಕೆ ತಾವು ಒಂದು ಒಳ್ಳೆಯ ಸಲಹೆಯನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಬಹಳ ದೀರ್ಘವಾಗಿ ಈ ವಿಚಾರವನ್ನು ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಸದನದ ಸಮಯವೂ ಕೂಡ ಬಹಳ ಮುಖ್ಯವಾದುದು ಮತ್ತು ಅಮೂಲ್ಯವಾದದ್ದು ಆಗಿರುವುದರಿಂದ ತಾವು ಇಲ್ಲಿಗೇ ಇದನ್ನು ಮುಕ್ತಾಯಗೊಳಿಸಬೇಕು ಎಂದು ಮತ್ತೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ಮೂಲಭೂತವಾದಂತಹ ವಿಷಯಗಳಿಗೆ ಅವರು ಪ್ರಸ್ತಾಪವನ್ನು ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಪ್ಪಿಕೊಂಡಿದ್ದಾರೆ, ಮತ್ತೆ ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಎಲ್ಲರೂ ಕೂಡ ಒಪ್ಪಿದ್ದಾರೆ. ನಾವು ಹತ್ತು ನಿಮಿಷ ತಡವಾಗಿ ಕೊಟ್ಟಿದ್ದೇವೆ, ಹದಿನೈದು ನಿಮಿಷ ತಡವಾಗಿ ಕೊಟ್ಟಿದ್ದೇವೆ ಎನ್ನುವುದು ತಾಂತ್ರಿಕ ಕಾರಣಗಳಿಗಾಗಿ ನಾವು ಜೋತು ಬೀಳುತ್ತೇವೆ ಎಂದಲ್ಲ. ಆದರೆ ನಾವೇ ರಚನೆ

ಮಾಡಿಕೊಂಡಿರತಕ್ಕಂಥ ನಿಯಮಾವಳಿಗಳ ಪ್ರಕಾರ ನಾವು ನಡೆಯಬೇಕಾಗಿರತಕ್ಕಂಥದ್ದು ನಮ್ಮ ಆದ್ಯ ಕರ್ತವ್ಯ. ಸುಪ್ರೀಂ ಕೋರ್ಟಿನ ದಸ್ತಾವೇಜುಗಳನ್ನು ಎಲ್ಲಿ ತರಿಸಲಿಕ್ಕೆ ಆಗುತ್ತಿತ್ತು ಎಂದು ಅವರು ಹೇಳಿದರು. ತರಿಸಬೇಕು ಎಂದು ಮನಸ್ಸು ಮಾಡಿದರೆ, fax machine ಇರುತ್ತದೆ, ತರಿಸಬೇಕಾಗಿತ್ತು. ತಾವು authenticate ಮಾಡಲಿಕ್ಕೂ ಕೂಡ ಬರುತ್ತದೆ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು ಏನೆಂದರೆ, ಮಾನ್ಯ ಅಧ್ಯಕ್ಷರೆ, 69ರ ನಿಯಮಾವಳಿಗಳ ಪ್ರಕಾರ ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಮಾಧುಸ್ವಾಮಿಯವರು ಕೊಟ್ಟಿರತಕ್ಕಂಥ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಚರ್ಚೆಯ ವಿಚಾರಗಳಲ್ಲಿ ಸಂಬಂಧಪಡತಕ್ಕಂಥದ್ದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಆ ಧೋರಣೆ ಅಥವಾ ಅದರ ಬಗ್ಗೆ ಪ್ರತಿಕ್ರಿಯೆ ಮೊದಲಾದದ್ದಕ್ಕೆ, ಉತ್ತರವನ್ನು ಕೊಡುತ್ತಾರೆ. ಹೀಗಿರುವ ಸನ್ನಿವೇಶದಲ್ಲಿ Revision Petition ಹಾಕಿರತಕ್ಕಂಥದ್ದು ನಿಜ. ಅದರ ಬಗ್ಗೆ ಯಾರೂ ಸುಳ್ಳು ಹೇಳಬೇಕಾಗಿರತಕ್ಕಂಥ ಅಗತ್ಯವಿಲ್ಲ, ತಾವೂ ಕೂಡ ಹೇಳಿದ್ದೀರಿ, Revision Petition ಹಾಕಿದ್ದೇವೆ......

Sri K.R. Rameshkumar : Is it a Revision Petition or a Review Petition? There is an abundant difference between a Revision Petition and a Review Petition.

Sri M.P. Prakash : No, I Stand corrected. ನಾನು ಮಾತನಾಡುವಾಗ Revision Petition ಎಂದು ಹೇಳಿದೆ. It is a Review Petition. ಈ ರಿವ್ಯೂ ಪಿಟಿಷನ್‌ನಲ್ಲಿ ಇರತಕ್ಕಂಥ ವಿಚಾರಗಳ ಬಗ್ಗೆ ಅಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈಗಾಗಲೇ ಆಗಿದೆ. ಅದು admit ಆಗಿದೆಯೋ ಇಲ್ಲವೋ, ಅದರ ವಿಚಾರಗಳ ಬಗ್ಗೆ ಚರ್ಚೆ ಬೇರೆ. ಅದರಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳಿಗೂ ಮಾನ್ಯ ಮುಖ್ಯಮಂತ್ರಿಗಳು ಕೊಡತಕ್ಕಂಥದ್ದು, ಈ ವಿಚಾರಗಳಿಗೆ ನಾವು ನಿರ್ಣಯಕ್ಕೆ ಸರ್ಕಾರ ಬಂದಿದೆ ಎಂದು ತಾವು ಪರಿಭಾವಿಸಬೇಕಾದಂತಹ ಅಗತ್ಯ ಇಲ್ಲ. ಕೆಲವು ಅನೇಕ ವಿಚಾರಗಳಿಗೆ..

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರೇ, ...

ಶ್ರೀ ಎಂ.ಪಿ. ಪ್ರಕಾಶ್ : ಅಲ್ಲಾ ಸಾರ್, There are several questions which have been questioned.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಈ ಉತ್ತರ ಬಿಟ್ಟು, ಯಾವುದು; ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರತಕ್ಕಂಥ ಮೇಲ್ಮನವಿಯ ಸಾರಾಂಶವನ್ನು ಬಿಟ್ಟು ಬೇರೆ ಇನ್ನೇನಾದರೂ ಹೇಳಲಿಕ್ಕೆ ಸಾಧ್ಯವೇ?

ಶ್ರೀ ಎಂ.ಪಿ. ಪ್ರಕಾಶ್ : ಇದೆ ಸಾರ್. ತಾವು ಸ್ವಲ್ಪ ದಯಮಾಡಿ ಕೇಳಿ. There are several legal and constitutional issues have been raised in those matters. ಅದು ಬರೀ ಇದಕ್ಕೆ ಸಂಬಂಧಪಡತಕ್ಕಂಥದ್ದು ಅಲ್ಲ. ನಮ್ಮ ನಿರ್ಣಯಗಳು ಬೇರೆ ಬೇರೆ ಇರುತ್ತದೆ.

Sri K.R. Rameshkumar : See, you are trying to land yourself into trouble. What is the scope of a Review Petition? Please tell me.

Sri M.P. Prakash : What is the scope of your argument in bringing the name of the Governor here? What is the scope of it?

Sri K.R. Rameshkumar : Because, you dragged in his name and provocated about his credential and talked about it.

Sri M.P. Prakash : .... With all respect, I say, many times he provocates. Then he diverts the attention from the main petition itself.

Sri K.R. Rameshkumar : Impossible. Let us go through the proceedings. I am prepared to take this charge. Let him establish it.

Sri M.P. Prakash : Sir, I listened you. ನೀವು ಏನು ಹೇಳಿದ್ದೀರೋ, ಅದನ್ನು ನಾವೆಲ್ಲಾ ಕೇಳಿದ್ದೇವೆ. ನಾವೂ ಕೂಡ ಏನು ಉತ್ತರ ಕೊಡುತ್ತೇವೆ ಎಂಬುದನ್ನು ಕೇಳಿದ ಮೇಲೆ ತಾವು ಹೇಳಿ. ಮಧ್ಯದಲ್ಲಿ ಪ್ರವೇಶಿಸುವುದು ಬೇಡ. ಸಾರ್, ವಿನಯಪೂರ್ವಕವಾಗಿ ನಾವು ಹೇಳಿತರಕ್ಕಂಥ ಮಾತನ್ನು ದಯವಿಟ್ಟು ಕೇಳಿ. ಕೇಳಿದ ಮೇಲೆ ತಾವು ಏನು ಅದಕ್ಕೆ ಉತ್ತರ ಕೊಡಬೇಕೋ, ತಾವು ಉತ್ತರ ಕೊಡಿ. ಅದೂ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ. ಸನ್ಮಾನ್ಯ ಅಧ್ಯಕ್ಷರೆ, ಈಗ ಮೇಲ್ನೋಟಕ್ಕೆ ಇದನ್ನು ತಾವು ತಿರಸ್ಕರಿಸಬೇಕು. ನಾವು ನಿಯಮಾವಳಿಗಳ ಪ್ರಕಾರವೇ ನಡೆದುಕೊಳ್ಳಬೇಕಾಗಿರತಕ್ಕಂಥ ಕಾರಣ ಇರುವುದರಿಂದ, ಈ 191ರ ಕೆಳಗೆ ಕೊಟ್ಟಿರತಕ್ಕಂಥದ್ದು ನಮ್ಮ ನಿಯಮಾವಳಿಗಳಿಗೆ ಅನುಗುಣವಾಗಿಲ್ಲದೆ ಇರತಕ್ಕಂಥ ಕಾರಣಕ್ಕಾಗಿ ತಾವು ಅದನ್ನು ತಿರಸ್ಕರಿಸಬೇಕೆಂದು ಆಗ್ರಹ

ಪೂರ್ವಕವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ಮೊದಲನೆಯದು. ಎರಡನೆಯದಾಗಿ, ಬಹಳ ಮುಖ್ಯವಾಗಿರತಕ್ಕಂಥದ್ದು, ನಮ್ಮ ಚರ್ಚೆ ಮತ್ತು ಮೊದಲು ಆಗಿರತಕ್ಕಂಥದ್ದಕ್ಕೆ ಸಂಬಂಧಪಟ್ಟಂತೆ ಅನೇಕ ನಮ್ಮ ರೂಲಿಂಗ್‌ಗಳೂ ಕೂಡ ಇವೆ. ಅದು ಬಹಳಷ್ಟು ವಿಚಾರದಲ್ಲಿ ಅವರ courtesy ಅನ್ನತಕ್ಕಂಥ ಮಾತನ್ನು ಹೇಳಿದರು. Privilege breach of courtesy: A partly statement made by a Minister outside the House. ಇಲ್ಲಿ ನಾವು Therefore, I regret my inability to give consent to the Privilege Motion ಅನ್ನತಕ್ಕಂಥ ಮಾತನ್ನೂ ಕೂಡ ಇಲ್ಲಿ ಇದೇ ಸದನದಲ್ಲಿ ಹಿಂದೆ ನಮ್ಮ ಹಿರಿಯರು ಕೊಟ್ಟಿರತಕ್ಕಂಥದ್ದೂ ಕೂಡ ಇದೆ. ಅದೇ ರೀತಿಯಾಗಿ ನಾವು newspaper ವಿಷಯದಲ್ಲೂ ಕೂಡ ಹೇಳಿದ್ದೇವೆ. ಅದರ documents ಗಳನ್ನೆಲ್ಲಾ ತಂದು ಅವರು ಹಾಜರು ಮಾಡಿಸಬಹುದಾಗಿತ್ತು. ಇದರ ಜೊತೆಗೆ ಈಗ ನಾವು 3ನೇ ತಾರೀಖು Review Petition ಅನ್ನು ಹಾಕಿದ್ದೇವೆ, ಅದರ ಬಗ್ಗೆ ಸದನದಲ್ಲಿ ಮುಚ್ಚಿಡಬೇಕಾಗಿರತಕ್ಕಂಥದ್ದು ಏನೂ ಇಲ್ಲ. ಅದಕ್ಕೇ ಸಂಬಂಧಪಟ್ಟಿರತಕ್ಕಂಥ ವಿಷಯಗಳನ್ನೂ ಕೂಡ ನಾವು ಪ್ರಸ್ತಾಪ ಮಾಡುತ್ತೇವೆ. ಆದರೆ ಸರ್ಕಾರ ಈ ಚರ್ಚೆಯ ಬಗ್ಗೆ ಏನು ಪ್ರತಿಕ್ರಿಯೆ ಕೊಡುತ್ತದೆ ಅನ್ನತಕ್ಕಂಥದ್ದನ್ನು ತಾವು ಕಾದು ನೋಡಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಅವಕಾಶ ಕೊಡಿ. ನಿಯಮ 69ರ ಕೆಳಗೆ ಅವರು ಎತ್ತಿರತಕ್ಕಂಥ ಅನೇಕ ಪ್ರಶ್ನೆಗಳು ಮತ್ತು ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಅನೇಕ ವಿಷಯಗಳಿಗೂ ಕುಡ ಅವರು ಉತ್ತರವನ್ನು ಕೊಡುತ್ತಾರೆ. ಈ ಎಲ್ಲಾ ಕಾರಣಗಳಿಗಾಗಿ ತಾವು ದಯವಿಟ್ಟು ಈ ನಿಯಮ 191ರ ಅಡಿಯಲ್ಲಿ ಕೊಟಿರತಕ್ಕಂಥ ನೋಟೀಸನ್ನು ತಿರಸ್ಕರಿಸಬೇಕು. ಇಲ್ಲಿಗೆ ಅದನ್ನು ತಾವು ಮುಕ್ತಾಯಗೊಳಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಎಂ.ಪಿ. ಪ್ರಕಾಶ್‌ರವರು ಪ್ರಸ್ತಾಪ ಮಾಡುವಾಗ ಇಲ್ಲಿ Governor ಹೆಸರು ಏತಕ್ಕೆ ಬಂತು ಎಂಬುದನ್ನು ಹೇಳಿದರು. ಆದರೆ xxx

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮಾನ್ಯ ಖರ್ಗೆಯವರು ಹಿರಿಯರಾಗಿದ್ದಾರೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪತ್ರಿಕೆಯಲ್ಲಿ ರಿವ್ಯೂ ಪಿಟಿಷನ್‌ನಲ್ಲಿ ಇದನ್ನು ತಾವು ಹಾಕಿದ್ದೀರಿ ಎಂದು ಇದೆ. ನೀವೇ ಹಾಕಿದ್ದೀರಿ. ಅದು ಇಲ್ಲವೆಂದರೆ ಇಲ್ಲವೆಂದು ನೀವು ಹೇಳಿ.

XXX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ತಾವು ಹಿರಿಯರಿದ್ದೀರಿ. ನಮ್ಮ ಪಿಟಿಷನ್‌ನಲ್ಲಿ ಏನೇನಿದೆ ಅನ್ನತಕ್ಕಂಥದ್ದನ್ನು ನಾವು ಪತ್ರಿಕೆಯಿಂದ ತಿಳಿಯಬೇಕಾಗಿದೆಯೇ? ಆ ಪತ್ರಿಕೆಯಲ್ಲಿ ಉದಾಹರಿಸಿ, ಇದನ್ನೇ ನೀವು ಬರೆದಿದ್ದೀರಿ ಎಂದು ನೀವು ಹೇಳುವುದು ತಮ್ಮಂತಹ ಹಿರಿಯರಿಗೆ ಎಷ್ಟು ಸಮಂಜಸ? ಸನ್ಮಾನ್ಯ ಸ್ಪೀಕರ್‌ರವರೆ, ಅದನ್ನು ನಾವು ಅವಲಂಬಿಸಬೇಕಾದಂತಹ ಅಗತ್ಯತೆ ಇಲ್ಲ...

ಶ್ರೀ ಧರ್ಮಸಿಂಗ್ : ಹಾಗಾದರೆ ಪತ್ರಿಕೆಯಲ್ಲಿ ಬಂದದ್ದು ಸುಳ್ಳು ಎಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಸುಳ್ಳಿನ ಪ್ರಶ್ನೆ ಅದಲ್ಲ.

ಶ್ರೀ ಧರ್ಮಸಿಂಗ್ : ಹಾಗಾದರೆ ನಾವು ಹೇಗೆ ಹೇಳಬೇಕು? ಪತ್ರಿಕೆಯ ಆಧಾರ ಇಟ್ಟುಕೊಂಡು....

ಶ್ರೀ ಎಂ.ಪಿ. ಪ್ರಕಾಶ್ : ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದರ....

ಶ್ರೀ ಎನ್. ಧರ್ಮಸಿಂಗ್ : ತಾವೇ ರಾಜ್ಯಪಾಲರ ಹೆಸರನ್ನು ಹೇಳಿದ್ದೀರಿ...

ಶ್ರೀ ಎಂ.ಪಿ. ಪ್ರಕಾಶ್ : ತಾವು ಅಷ್ಟೇ ಕೇಳಿದ್ದರೆ ಇಲ್ಲಿ ಏನೂ ಪ್ರಶ್ನೆ ಇರುತ್ತಿರಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ,......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಳ್ಳಿದ್ದರೆ ಸುಳ್ಳು ಎಂದು ಹೇಳಬೇಕು. ನಾಳೆ ನಾವು Right to Information Act ಪ್ರಕಾರ ನಿಮಗೆ application ಕೊಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ : ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು Review Petition file ಮಾಡಿದ್ದೀರಲ್ಲಾ, ಅದರಲ್ಲಿ ಏನೇನಿದೆ? Along with that petition, everything you produce and let us see.

ಶ್ರೀ ಎಂ.ಪಿ. ಪ್ರಕಾಶ್ : ಅದು ಸರಿಯಾದಂತಹ ಮಾರ್ಗವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸುಮ್ಮನೆ ವಾದಕ್ಕಾಗಿ ವಾದ ಮಾಡಬೇಡಿ. ತಾವು ಬರೆದಿದ್ದನ್ನು ಸತ್ಯ ಇದ್ದರೆ ಒಪ್ಪಿಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ವಾದಕ್ಕಾಗಿ ವಾದವನ್ನು ಮಾಡುತ್ತಿಲ್ಲ. ತಾವು ಈಗೇನು ಹೇಳಿದ್ದೀರಿ, ಇದು ಸರಿಯಾದಂತಹ ಮಾರ್ಗವಾಗಿದೆ. XXX

XXX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

Sri K.R. Rameshkumar : I stand by that view even now. (Interruptions) ...... I adhere to my stand.

ಅಧ್ಯಕ್ಷರು : ದಯಮಾಡಿ ಮಾನ್ಯ ರಾಜ್ಯಪಾಲರ ಬಗ್ಗೆ ಯಾರಾದರೂ ಏನಾದರೂ ಮಾತನಾಡುವುದು ಸರಿಯಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ..... ಮಾನ್ಯ ರಮೇಶ್ ಕುಮಾರ್‌ರವರು ಉದ್ರೇಕಕ್ಕೆ ಹೋಗಬೇಕಾದಂತಹ ಅಗತ್ಯತೆ ಇಲ್ಲ. ಆದುದರಿಂದ ಅಲ್ಲಿ ಅವರು ಹುದ್ದೆಯನ್ನು ಸ್ವೀಕರಿಸಬೇಕೆ? ಬೇಡವೇ ಎನ್ನುವಂತಹ ವಿಚಾರ ಇದ್ದರೆ, ನಾನು ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ರೀತಿಯಾದಂತಹ ಗುರುತರವಾದಂತಹ ಜವಾಬ್ದಾರಿಗಳನ್ನು ಹೊತ್ತುಕೊಂಡು ಬೇರೆ ಹುದ್ದೆಗಳನ್ನು ಸ್ವೀಕಾರ ಮಾಡಿತಕ್ಕಂಥದ್ದರ ಬಗ್ಗೆ ಬೇಕಾದಷ್ಟು ಉದಾಹರಣೆಗಳಿವೆ. ಆದರೆ ಅದು ಇದಕ್ಕೆ ಸಂಬಂಧಪಟ್ಟಿತಕ್ಕಂಥದ್ದಲ್ಲ. ತಾವು ಅದನ್ನು ಸೀಮಿತಗೊಳಿಸಬಹುದು. ತಾವು ಅದನ್ನು ಎಲ್ಲಿಗೆ ಸೀಮಿತಗೊಳಿಸಬೇಕಾಗಿತ್ತು ಎಂದರೆ, ಅದು ಪತ್ರಿಕೆಯಲ್ಲಿ ಬಂದಿದೆ ಎನ್ನಬಹುದಾಗಿತ್ತು. ಆ ಕಾರಣಕ್ಕಾಗಿಯೇ ನಾನು ಅದನ್ನು ಲಂಬಿಸಲಿಕ್ಕೆ. ಮತ್ತೆ ನಾನು provoke ಮಾಡುವುದಕ್ಕೆ ತಯಾರಿಲ್ಲ. ನಾನು ಇಷ್ಟನ್ನೂ ಮಾತ್ರ ವಿನಯಪೂರ್ವಕವಾಗಿ ಆಗ್ರಹಿಸುತ್ತಿದ್ದೇನೆ. ಇದು ನಿಯಮಾವಳಿಗಳ ಪ್ರಕಾರ ಸರಿ ಇಲ್ಲದ್ದರಿಂದ ತಾವು ಮೇಲ್ನೋಟಕ್ಕೆ ಇದನ್ನು ತಿರಸ್ಕರಿಸಬೇಕು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅರ್ಜಿ ಹಾಕಿಕೊಂಡು ಮಾಹಿತಿ ಪಡೆದುಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರು : ಈಗ ದಯಮಾಡಿ ನಾನು ಹೇಳುವುದನ್ನು ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ನಿಯಮ 191ರ ಕೆಳಗಡೆ ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ. ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯರಾದ ಖರ್ಗೆಯವರು, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದನ್ನೆಲ್ಲಾ ನಾನು ಕೇಳಿದ್ದೇನೆ. ಈ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಂಸದೀಯ ಸಚಿವರು ಹೇಳಿದಂತಹ ವಿಚಾರಗಳನ್ನೂ ಕೂಡ ನಾನು ಕೇಳಿದ್ದೇನೆ. ಈಗ ನಾನು ನನ್ನ ರೂಲಿಂಗ್ ಅನ್ನು ಕಾದಿರಿಸಿದ್ದೇನೆ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3 ಗಂಟೆವರೆಗೆ ಮುಂದೂಡಲ್ಪಟ್ಟಿತು)

(ಸದನವು ಮತ್ತೆ ಮಧ್ಯಾಹ್ನ 3 ಗಂಟೆ 24 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.